MR. DEPUTY SPEAKER : The question is :

"That in sub-clause (2) for the word "April" the word "May" shall be substituted. "

The amendment was negatived

MR. DEPUTY SPEAKER : The question is .

"T at clause 1, tte long Title, the Preamble and the Enacting Formula do stand part of the Bill. "

The motion was adopted

Clause 1, long Title, the Preamble and the Enacting Formula were added to the Bill.*

Motion to pass

SRI A. MOHAMED ALI.—Sir, I move :

"That the Karnataka Motor Vehicles (Taxation on passengers and goods) (Amendment) Bill, 1975 be passed. "

MR. DEPUTY SPEAKER : The question is :

"That the Karnataka Motor Vehicles (Taxation on Passengers and goods) (Amendment) Bill, 1975 be passed. "

The motion was adopted and the Bill was passed

KARNATAKA RELIGIOUS AND CHARITABLE INSTITUTIONS AND TRUST BILL, 1974.

Motion to consider

SRI N. HUCHMASTHY GOWDA (Minister for Revenue). — Sir, I move

"That the Karnata a Religious and Charitable institutions and Trust Bill, 1974 be taken into consideration"

MR. DEPUTY SPEAKER —Motion moved.

"That the Karnataka Religious and Charitable Institutions and Trust Bill, 1974 be taken into consideration"

† ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ ಈ ರಾಜ್ಯದ ಪುನರ್ವಿಂಗಡಣೆ ಯಾಗುವಾಗ ೫ ಭಾಗಗಳು ಒಟ್ಟಿಗೆ ಸೇರಿ ಈ ರಾಜ್ಯದ ಪುನರ್ವಿಂಗಡಣೆಯಾಯಿತು. ಅಂದಿನಿಂದ ಈ ೫ ಭಾಗಗಳಲ್ಲ ಈ ಸಂಸ್ಥೆಗಳಿಗೆ ಸಂಬಂಧಪಟ್ಟಂತ ೫ ವಿಧವಾದಂಥ ಕಾನೂನುಗಳು ಜಾರಿಯಲ್ಲಿವೆ. ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಕಾನೂನುಗಳು ಇಂದಿಗೂ ಸಹ ಜಾರಿಯಲ್ಲಿವೆ The Madras Hindu Charitable and Endowment Act 1950 as amended in 954, the Bombay Public Trusts Act 1950, the Hyderabad

Endowments Regulations Act 1349 Fasli has been in force, the Mysore Religious and Charitable Institutions Regulations Act 1927, and the Coorg Temple Funds Management Act ಎಂಬುದಾಗಿ ೫ ಕಾನೂನುಗಳು ಈಗ ಜಾರಿಯಲ್ಲಿವೆ. ಈ ಎಲ್ಲ ಸಂಸ್ಥೆಗಳನ್ನು ಒಂದೇ ಕಾನೂನಿನ ಹತೋಟಿಯಲ್ಲಿ ತೆಗೆದುಕೊಂಡು ಬಂದು, ಆ ಕಾನೂನಿನ ಪ್ರಕಾರ ಅವುಗಳ ವ್ಯವಹಾರಣೆ ನಡೆಸಿಕೊಂಡು ಹೋಗುವುದಕ್ಕೆ ಇದರಲ್ಲಿ ಏರ್ಪಾಡು ಮಾಡಲಾಗಿದೆ. ಮುಖ್ಯವಾಗಿ ರಿಜಿಸ್ಟರ್ ಮಾಡಿಕೊಳ್ಳುವ ಬಗೆ, ಲೆಕ್ಕಪತ್ರಗಳನ್ನು ಆಡಿಟ್ ಮಾಡುವ ಬಗ್ಗೆ, ಅವುಗಳ ಅಕೌಂಟ್ಸನ್ನು ಮೇಂಟೇನ್ ಮಾಡುವ ಬಗ್ಗೆ ಒಂದೇ ರೀತಿಯ ಕಾನೂನು ಇರಬೇಕಾದುದು ಅಗತ್ಯವೆಂದು ಈ ಮಸೂದಾ ಕಾನೂನನ್ನು ತಯಾರು ಮಾಡಲಾಗಿದೆ ಇಂತಹ ಒಂದು ಕಾನೂನನ್ನು ೧೯೬೪ರಲ್ಲಿ ತಯಾರು ಮಾಡಿ ಅದನ್ನು ಈ ಸಭೆಯ ಮುಂದೆ ಮಂಡಿಸಲಾಗಿತ್ತು. ನಂತರ ಅದನ್ನು ಜಂಟೀ ಪರಿಶೀಲನಾ ಸಮಿತಿಗೆ ಕಳುಹಿಸಲಾಗಿತ್ತು, ಆದರೆ ಅದು ಲ್ಯಾಪ್ಸ್ ಆಯಿತು, ಮತ್ತೆ ಅದನ್ನು ೧೯೬೯ರಲ್ಲಿ ಈ ಸಭೆಯ ಮುಂದೆ ತರಲಾಯಿತು ಆಗಲೂ ಕೂಡ ಅದು ಲ್ಯಾಪ್ಸ್ ಆಯಿತು. ಆಗ ಅದು ಕಾನೂನು ಆಗುವುದಕ್ಕೆ ಸಾಧ್ಯವಾಗದೆ ಸುಂತು ಹೋಗಿತ್ತು, ಈಗ ಮತ್ತೆ ಅದರ ಒಂದು ಅವಶ್ಯಕತೆಯನ್ನು ಮತ್ತು ಪ್ರಾಮುಖ್ಯತೆಯನ್ನು ಕಂಡು, ಕೆಲವು ಬದಲಾವಣೆಗಳನ್ನು ಈ ಹಿಂದಿನ ಕಾನೂನಿಗೆ ಮಾಡಿ ಈ ಸಭೆಯ ಮುಂದೆ ಈಗ ತರಲಾಗಿದೆ. ಈ ಮೊದಲು ತಯಾರು ಮಾಡಿದ ಕಾನೂನಿನಲ್ಲಿ, ಎಲ್ಲ ಧರ್ಮಗಳಿಗೂ ಸಂಬಂಧಪಟ್ಟಂತೆ ಈ ಕಾನೂನನ್ನು ಅಳವಡಿಸಬೇಕೆಂಬುದು ಮೂಲ ಉದ್ದೇಶವಾಗಿದ್ದರೂ ಸಹ, ಮುಸ್ಲೀಂ ಜನಾಂಗಕ್ಕೆ ಸೇರಿದಂಥ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದಂಥ ಸಂಸ್ಥೆಗಳನ್ನು ಇದಕ್ಕೆ ಹೊರತು ಮಾಡಿ ಕಾನೂನು ಮಾಡಬೇಕೆಂದು ಕೆಲವು ಮನವಿಗಳು ಸರ್ಕಾರಕ್ಕೆ ಬಂದವು.

ಶ್ರೀ ಕೋಣಂದೂರು ಲಿಂಗಪ್ಪ —ಜೈನರದ್ದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಜೈನರದ್ದು ಇಲ್ಲ, ಈ ರೀತಿ ಮನವಿಗಳು ಬಂದಮೇಲೆ, ಅವುಗಳಿಗೂ ಸಹ ಗಮನ ಕೊಡಲಾಯಿತು, ಈ ಮಧ್ಯೆ ಮುಸ್ಲೀಮ್ ಇನ್ಸ್‌ಟಿಟ್ಯೂಷನ್‌ಗಳಿಗೆ ಬೇರೆ ಒಂದು ಕಾನೂನು ಕೂಡ ಬಂದಿದ್ದರಿಂದ ಅದನ್ನು ಹೊರತುಪಡಿಸಿ ಈ ಕಾನೂನನ್ನು ಮಾಡಲಾಗಿದೆ. ಇದರಲ್ಲಿ ಕ್ರಿಶ್ಚಿಯನ್ ಇನ್ಸ್‌ಟಿಟ್ಯೂಷನ್‌ಗಳನ್ನು ಹೊರತುಪಡಿಸಬೇಕೆಂದಿದ್ದರೂ ಸಹ, ಮುಂಬೈನಂದ ಬಂದಂಥ ಭಾಗಗಳಲ್ಲಿ ಇವೊತ್ತಿಗೂ ಕೂಡ ಆಸ್ತಿಯ ಕಾನೂನಿನಲ್ಲಿ ಈ ಸಂಸ್ಥೆಗಳು ಸೇರಿರುವುದರಿಂದ, ಮತ್ತು ಇತರ ಭಾಗೆಗಳಲ್ಲಿರುವ ಸಂಸ್ಥೆಗಳ ಮೇಲ್ವಿಚಾರಣೆ ನೋಡಿ ಕೊಳ್ಳುವುದಕ್ಕೆ ಯಾವ ಒಂದು ಅವಕಾಶವಿಲ್ಲದಿರುವ ಕಾರಣದಿಂದ ಅವುಗಳನ್ನು ಸಹ ಇದರಲ್ಲಿ ಅವಶ್ಯಕವಾಗಿ ಸೇರಿಸಬೇಕಾಗಿದೆ. ಈ ಸಂಸ್ಥೆಗಳನ್ನು ಸೇರಿಸುವಾಗ ಬಹಳ ಮುಖ್ಯವಾದ ಅಂಶವೆಂದರೆ ರಿಜಿಸ್ಟರ್ ಮಾಡಿಕೊಳ್ಳತಕ್ಕದ್ದು, ಅಕೌಂಟ್ಸನ್ನು ಮೇಂಟೇನ್ ಮಾಡತಕ್ಕದ್ದು, ಆಡಿಟ್ ಮಾಡತಕ್ಕದ್ದು, ಇವುಗಳು ಮುಖ್ಯವಾದ ಅಂಶಗಳೇ ಹೊರತು, ಈ ಸಂಸ್ಥೆಗಳೊಳಗೆ ನಡೆಯತಕ್ಕ ಆಡಳಿತ ವ್ಯವಹಾರ ಏನಿದ್ದರೂ ಆಯಾ ಟ್ರಸ್ಟ್‌ನಲ್ಲಿರತಕ್ಕಂಥ ಕಾಲಂಗಳು ಏನಿವೆ, ಅವನ್ನು ಅನುಸರಿಸಿ ನಡೆಯತಕ್ಕದ್ದು ಎಂದು ಇದರಲ್ಲಿ ತಿಳಿಸಲಾಗಿದೆ. ಅವುಗಳ ಒಳಗಿನ ವ್ಯವಹಾರದಲ್ಲಿ ಪ್ರವೇಶ ಮಾಡುವುದಕ್ಕೆ ಈ ಕಾನೂನಿನಲ್ಲಿ ಅವಕಾಶವಿಲ್ಲ.

ಇನ್ನು ಎರಡನೆಯದಾಗಿ, ಹಳೆಯ ಮೈಸೂರು ಭಾಗದಲ್ಲಿ ಯಾವ ಕಾನೂನು ಇದೆ, ಅದರಲ್ಲಿರುವ ಮುಖ್ಯವಾದ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದನ್ನೇ ಎಲ್ಲಾ ಭಾಗಗಳಲ್ಲಿಯೂ ಜಾರಿಗೆ ತರುವುದಕ್ಕೆ ಮತ್ತು ಈ ಸಂಸ್ಥೆಗಳ ಮೇಲೆ ಹೆಚ್ಚಿನ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿದೆ.

ಇನ್ನು ಮೂರನೆಯದಾಗಿ, ಈ ಸಂಸ್ಥೆಗಳ ಮೇಲ್ವಿಚಾರಣೆಗಾಗಿ ಒಬ್ಬರು ಕಮೀಷನರ್ ಅವರನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳನ್ನು, ಸಬ್-ಡಿವಿಜನ್ ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಕ ಮಾಡಲಾಗುವುದು, ಮತ್ತೊಂದು ಮುಖ್ಯವಾದ ಅಂಶವೆಂದರೆ, ಕೆಲವು ವ್ಯಾಪಾರಿ ಸಂಸ್ಥೆಗಳು ಧರ್ಮಕ್ಕಾಗಿ ಎಂದು ಸ್ವಲ್ಪ ಹಣವನ್ನು ತೆಗೆದಿಡುತ್ತಾರೆ ಈಗ ಅದರ ಮೇಲೆ ಯಾವ ಹತೋಟಿಯೂ ಇಲ್ಲ, ಅದರ ಮೇಲೂ ಹತೋಟಿ ಇಟ್ಟುಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿ ಕೊಟ್ಟಿದೆ ಜೊತೆಗೆ ಚಾರಿಟಬಲ್ ಟ್ರಸ್ಟ್ ಅಡ್ಮಿನಿಸ್ಟ್ರೇಷನ್ ಫಂಡ್ ಎಂದು ಒಂದು ನಿಧಿಯನ್ನು ಮಾಡುವುದಕ್ಕೆ ಇದರಲ್ಲಿ ಅವಕಾಶವಿದೆ ಮತ್ತು ಕಾಮನ್ ಗುಡ್ ಫಂಡ್ ಎಂದು ಮಾಡಿ, ಎಲ್ಲ ಸಂಸ್ಥೆಗಳಿಗೂ ಅದರಿಂದ ಸಹಾಯವಾಗಬೇಕು ಎಂಬ ಅಂಶವನ್ನು ಇದರಲ್ಲಿ ಸೇರಿಸಲಾಗಿದೆ. ಕೆಲವು ಸಂಸ್ಥೆಗಳಿಗೆ ಹಣ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲದಿರುವ ಸಂದರ್ಭಗಳಲ್ಲಿ, ಅಂದರೆ ಯಾವುದಾದರೂ ಒಂದು ಮೂಲ ಉದ್ದೇಶಕ್ಕೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಹೆಚ್ಚು ಕಡಿಮೆ ಹೊಂದಿಕೊಳ್ಳುವಂತಹ

ಒಂದು ಭಾಗಕ್ಕೆ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡುವ ಹಾಗೆ ಇದರಲ್ಲಿ ನವೂದು ಮಾಡಿಕೊಡಲಾಗಿದೆ. ಆದರೆ ಆರ್ಜಿಕರನ್ನು ಆನುವಂಶಿಕವಾಗಿ ನೇಮಕ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿಲ್ಲ. ಈ ಸಂಸ್ಥೆಗಳಿ ದ ಬರತಕ್ಕಂಥ ಹಣವನ್ನು ಲೆಕ್ಕ ಹಾಕಿ, ಆ ಹಣದಿಂದಲೇ ಕಮೀಷನರ್. ಡಿ. ಸಿ.ಗಳನ್ನು ಮತ್ತು ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಲಾಗುತ್ತದೆ. ಈ ವಿಷಯ ಕನ್‌ಕರೆಂಟ್ ಲಿಸ್ಟ್‌ಗೆ ಸೇರಿರುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಇದನ್ನು ಜಾರಿಗೆ ತರಬೇಕಾಗಿದೆಯಾದರೂ ಸಹ, ಈ ಹಿಂದೇ ಇದೇ ತರಹ ಕಾನೂನನ್ನು ಜಾರಿಗೆ ತರಬೇಕೆಂದಿದ್ದಾಗಲೇ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದರಿಂದ ಮತ್ತು ಅವರ ಒಪ್ಪಿಗೆ ಪಡೆದಿದ್ದರಿಂದ ಮತ್ತು ಹಿಂದೆ ಇದ್ದ ಬಿಲ್‌ನ ಬಹುಮುಖ್ಯವಾದ ವಿಷಯಗಳು ಇದರಲ್ಲಿರುವುದರಿಂದ ಮತ್ತೆ ಆ ಬಗ್ಗೆ ಕೇಂದ್ರಸರ್ಕಾರದ ಒಪ್ಪಿಗೆ ಕೇಳಬೇಕಾದಂಥ ಅವಶ್ಯಕತೆ ಇಲ್ಲ ಹಾಗೆ ಅನ್ನುವುದು ಈಗ ನಮ್ಮ ಮುಂದಿದೆ. ಜೊತೆಗೆ ಕಮಿಷನರ್‌ಗೆ ಡಿ. ಸಿ.ಗಳಿಗೆ, ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಮತ್ತು ಇತರೇ ಸಿಬ್ಬಂದಿಗಳಿಗೆ ಆಗತಕ್ಕಂಥ ಖರ್ಚನ್ನು ಸರ್ಕಾರವೇ ಇಲ್ಲಿ ವಹಿಸಿಕೊಳ್ಳಬೇಕಾದಂಥ ಅಗತ್ಯವಿಲ್ಲ ಈ ಸಂಸ್ಥೆಗಳಿಂದ ಬರತಕ್ಕಂಥ ಹಣವನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಇದರಲ್ಲಿ ಸೇರಿಸಿದೆ. ಆದಕಾರಣ ಮತ್ತೆ ನಾವು ಒಂದು ಫೈನಾನ್ಸಿಯಲ್ ಮೆಮೊರ್ಯಾಂಡಮ್‌ನ್ನು ಕೊಡಬೇಕಾದಂಥ ಅಗತ್ಯವಿಲ್ಲವೆಂಬುದನ್ನೂ ನಾವು ಇದರಲ್ಲಿ ಕಾಣಬಹುದು.

ಬಹಳ ಮುಖ್ಯವಾದ ವಿಷಯಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಎಲ್ಲಾ ವಿಷಯಗಳನ್ನೂ ಸವಿಸ್ತಾರವಾಗಿ ಹೇಳಬೇಕಾದಂತಹ ಅಗತ್ಯ ಇಲ್ಲ ಎಂದು ನಾನು ಭಾವಿಸಿಂತ್ತೇನೆ. ಏಕೆಂದರೆ ಇದರಲ್ಲಿ ಅನೇಕ ವಿವರಗಳನ್ನು ಪರಿಶೀಲನೆ ಮಾಡಬೇಕಾದ ಅಗತ್ಯ ಇದೆ ಎಂದು ನನಗೆ ಕಂಡು ಬಂತು. ಆದ್ದರಿಂದ ಈಗ ಇಷ್ಟು ವಿಷಯಗಳನ್ನು ಮಾತ್ರ ಹೇಳಿ ಈ ಮಸೂದೆಗೆ ಮಾನ್ಯ ಸಭೆ ಅನುಮತಿಯನ್ನು ಕೊಡಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

12-00 Noon

† ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಬುದಿರತಕ್ಕ ರಿಲಿಜಿಯಸ್ ಅಂಡ್ ಚಾರಿಟಿಬಲ್ ಇನ್‌ಸ್ಟಿಟ್ಯೂಷನ್ ಅಂಡ್ ಟ್ರಸ್ಟ್ ಬಿಲ್ ಏನಿದೆ ಇದರಲ್ಲಿ ಒಂದೇ ಒಂದು ತೊಡಕು ಏನೆಂದರೆ ಒಂದು ಕಡೆ ನಮ್ಮ ದೇಶವನ್ನು ಸೆಕ್ಯೂಲರ್ ಸ್ಟೇಟ್ ಮತ್ತು ಸೆಕ್ಯುಲರ್ ರಾಷ್ಟ್ರ ಎಂದು ಕರೆಯುತ್ತಾರೆ ಸೆಕ್ಯುಲರ್ ಸ್ಟೇಟ್ ಎಂದು ಹೇಳಿದಾಗ ಇಲ್ಲಿ ತೆಗೆದುಕೊಂಡು ಬರತಕ್ಕ ಪ್ರತಿಯೊಂದು ಬಿಲ್ಲನ್ನೂ ಕೂಡ ಹಿಂದೂ ಬಿಲ್ ಎಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಜೈನರು ಇದ್ದಾರೆ. ಮುಸಲ್ಮಾನರು ಇದ್ದಾರೆ, ಕ್ರಿಶ್ಚಿಯನ್ಸ್ ಇದ್ದಾರೆ ಹೀಗೆ ಬೇಕಾದಷ್ಟು ಜನಾಂಗದವರು ಇದ್ದಾರೆ ಧಾರ್ಮಿಕವಾಗಿ ಸೆಂಟಿಮೆಂಟಲ್ ವಿಚಾರಗಳ ಬಗ್ಗೆ ಮತಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಸ್ವಲ್ಪ ಡಿಲಿಕೆಸಿ ಇರುವುದನ್ನು ಮಾತ್ರ ಹೊರತು ಪಡಿಸಿದ್ದಾರೆ. ಹಿಂದೂಗಳಾಗಲಿ, ಜೈನರಾಗಲಿ, ಕ್ರಿಶ್ಚಿಯನರಾಗಲೀ ಎಲ್ಲರಿಗೂ ಕೂಡ ಸಮಸ್ವಯವಾದ ಒಂದು ಕ್ರಮ ಇರಬೇಕಾದ್ದು ಅಗತ್ಯ. ಸೆಕ್ಯೂಲರ್ ಸ್ಟೇಟಿನಲ್ಲಿ ಹಿಂದೂ ಬಿಲ್ ಎಂದು ತಂದಿರತಕ್ಕದ್ದು ಹಿತವಾಗಿ ಕಾಣುವುದಿಲ್ಲ ಅಯಾ ಮತಗಳಿಗೆ ಸಂಬಂಧಪಟ್ಟ ಸೆಂಟಿಮೆಂಟಲ್ ಅಬ್ಜಕ್ಷನ್ ಇದರೆ ಅದಕ್ಕೆ ಬೇರೆ ಚಾಪ್ಟರುಗಳನ್ನು ಇಟ್ಟು ತಾವು ಹೇಳಿದ ಪ್ರಕಾರ ಲೆಕ್ಕವನ್ನು ಸರಿಯಾಗಿ ಇಡಬೇಕು. ಆಡಳಿತ ಸರಿಯಾಗಿ ಇರಬೇಕು. ಮತ್ತು ಆಡಳಿತ ಸ್ವಚ್ಛವಾಗಿರಬೇಕು ಆಸ್ತಿಪಾಸ್ತಿಗಳನ್ನು ಸರಿಯಾಗಿ ನೋಡಿಕೊಳ್ಳಬೇಕು. ಯಾವ ಜಾತಿಯವರ ಟ್ರಸ್ಟೇ ಆಗಲಿ ಲೆಕ್ಕವನ್ನು ಸರಿಯಾಗಿ ಇಡಬೇಕು. ಆರತಕ್ಕ ಹಣವನ್ನು ಸರಿಯಾಗಿ ಉಪಯೋಗ ಮಾಡಬೇಕು. ಬೆಂಗಳೂರು ನಗರದಲ್ಲಿ ಚಿಕ್ಕಪೇಟೆಯಲ್ಲಿ ಒಂದು ಜೈನರ ದೇವಸ್ಥಾನ ಇದೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ಅಲ್ಲಿ ಒಂದು ನಿಧಿಯನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಬಡವರಿಗೆ ಇಂಟರೆಸ್ಟ್ ಫ್ರೀಲೋನ್ ಕೊಡುತ್ತಾರೆ. ಕೆಲವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲವನ್ನು ಕೊಡುತ್ತಾರೆ. ಕೆಳಗೆ ಬಿದ್ದವರನ್ನು ಮೇಲಕ್ಕೆ ಎತ್ತುವುದಕ್ಕೆ ಹಣ ಸಹಾಯ ಮಾಡುತ್ತಾರೆ ಇನ್ನೂ ಬೇರೆ ಬೇರೆ ತರಹ ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದ್ದರಿಂದ ಈ ಒಂದು ಕಾನೂನನ್ನು ಅದಕ್ಕೂ ಕೂಡ ಅನ್ವಯಿಸಬೇಕಾಗಿತ್ತು ಧಾರ್ಮಿಕವಾಗಿ ಸೆಂಟಿಮೆಂಟಲ್ ಅಬ್ಜಕ್ಷನ್ ಇದ್ದರೆ ಅಂಥಾದ್ದಕ್ಕೆ ಬೇರೆ ಚಾಪ್ಟರನ್ನು ಮಾಡಿ ಅವರು ಸರಿಯಾಗಿ ಲೆಕ್ಕವನ್ನು ಇಡುವ ಹಾಗೆ ಮಾಡಿ ಇದನ್ನೂ ಅದಕ್ಕೆ ಅನ್ವಯ ಮಾಡಿದ್ದರೆ ಚೆನ್ನಾಗಿತ್ತು. ಅನೇಕ ವಾಕ್ಫ್ ಪ್ರಾಪರ್ಟಿಗಳಲ್ಲಿ ಬೇಕಾದಷ್ಟು ಲೋಪದೋಷಗಳು ಇವೆ ಇದು ತಮಗೆ ಗೊತ್ತಿದೆ. ಆದ್ದರಿಂದ ಕ್ರಿಶ್ಚಿನ್‌ರಾಗಲೀ ಮುಸ್ಲೀಮರಾಗಲೀ ಜೈನರಾಗಲೀ ಅಥವಾ ಬೇರೆ ಯಾವ ಜನಾಂಗದವರಾಗಲೀ ಎಲ್ಲವನ್ನೂ ಸಮಗ್ರವಾಗಿ ತೆಗೆದುಕೊಂಡು ಇದರಲ್ಲಿ ಆಳವಡಿಸಿದ್ದರೆ ಚೆನ್ನಾಗಿತ್ತು. ಇಂಥಾ ಒಂದು ಬಿಲ್ ಅಗತ್ಯವಾಗಿ ಬೇಕಾಗಿತ್ತು ಧಾರ್ಮಿಕ ಸಂಸ್ಥೆಗಳು, ದೇವಸ್ಥಾನಗಳಲ್ಲಿ ಇರತಕ್ಕ ಕೆಲವರು ಅವುಗಳನ್ನು ತಪ್ಪು ಸ್ವಂತ ಸ್ವತ್ತಾಗಿ

ಉಪಯೋಗಿಸುತ್ತಿದ್ದಾರೆ. ಸಾರ್ವಜನಿಕರ ಹಣವನ್ನು ಆ ರೀತಿ ಉಪಯೋಗ ಮಾಡಬಾರದು. ತಿರುಪತಿ ದೇವಸ್ಥಾನ ಎಂಡೋಮೆಂಟ್ ಟ್ರಸ್ಟಿಗೆ ಸೇರಿದ ಮೇಲೆ ಅಲ್ಲಿ ಒಂದು ಯೂನಿವರ್ಸಿಟಿಯೇನು ನಡೆಸುವುದಕ್ಕೆ ಅನುಕೂಲವಾಯಿತು. ದೇವಸ್ಥಾನದ ಆಸ್ತಿಪಾಸ್ತಿಗಳನ್ನು ಧಾರ್ಮಿಕ ಸಂಸ್ಥೆಯ ಆಸ್ತಿಪಾಸ್ತಿಗಳನ್ನು ದುರುಪಯೋಗ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದೆಂ ಈ ದೃಷ್ಟಿಯಿಂದ ತಾವು ಸಮಗ್ರವಾಗಿ ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇದೆ. ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ನಾನು ಇನ್ನು ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಇಂಥಾ ಒಂದು ಬಿಲ್ಲನ್ನು ತರುವಾಗ ಇದು ಸೆಕ್ಯೂಲರ್ ಸ್ವೇಟ್ ಎಂದು ತಿಳಿದುಕೊಂಡು ಇದನ್ನು ಎಲ್ಲಕ್ಕೂ ಅಪ್ಲಿಕಬಲ್ ಆಗುವಂತೆ ಮಾಡಬೇಕು. ಸಂಟಿಮೆಂಟಲ್ ಆಗಿ ಯಾರಿಗಾದರೂ ಇದರಿಂದ ಹರ್ಟ್ ಆಗುವುದಾದರೆ ಅದನ್ನು ಮಾರ್ಪಾಡು ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಕಾಗೋಡುತಿಮ್ಮಪ್ಪ (ಸಾಗರ) —ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ಈ ಸಭೆಯಮುಂದೆ ತಂದಿರತಕ್ಕ ರಿಲಿಜಿಯಸ್ ಆಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಆಂಡ್ ಟ್ರಸ್ಟ್ ಬಿಲ್ ಏನಿದೆ ಇದು ಸ್ವಾಗತಾರ್ಹವಾದದ್ದು ಮತ್ತು ಸರಿಯಾದುದು. ಯಾವ ದೃಷ್ಟಿ ಕೋಣದಿಂದ ಈ ಒಂದು ವಿಧೇಯಕವನ್ನು ತಂದು ಎಲ್ಲಾ ಧಾರ್ಮಿಕ ಸಂಸ್ಥೆಗಳ ಮೇಲೆ ಮತ್ತು ಅವುಗಳ ವ್ಯವಹಾರಗಳ ಮೇಲೆ ಮತ್ತು ಅವುಗಳ ಸ್ವರೂಪದ ಮೇಲೆ ಒಂದು ಹೊಸ ಬೆಳಕನ್ನು ಚೆಲ್ಲುವ ಉದ್ದೇಶದಿಂದ ತರ ಬೇಕಾದಂತಹ ದೃಷ್ಟಿಯಿಂದ ತರಲಿಲ್ಲ ಎಂದು ಹೇಳಬೇಕಾಗಿದೆ. ಶ್ರೀಮಾನ್ ಶಾಮಣ್ಣನವರು ಹೇಳಿದ ಹಾಗೆ ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ಧರ್ಮಕ್ಕೆ ಸೇರಿದಂತಹ ಸಂಸ್ಥೆಗಳನ್ನು ಇದರಿಂದ ಹೊರತು ಪಡಿಸಿದ್ದಾರೆ ಎಂದು ಹೇಳಿದ್ದಾರೆ ಇದಕ್ಕೆ ಅವರಿಂದ ಕೆಲವು ಮನವಿಗಳು ಬಂದ ಕಾರಣದಿಂದ ಅವುಗಳನ್ನು ಹೊರತು ಪಡಿಸಿದ್ದೇವೆ ಎಂದು ಹೇಳಿದ್ದಾರೆ, ಇದು ಸಾಧುವಲ್ಲ. ಈ ಮಾತನ್ನು ಹೇಳುವಾಗ ರೇಣುಕಾ ಎಲ್ಲಮ್ಮ ಸಂಸ್ಥೆಗೆ ಸಂಬಂಧಪಟ್ಟ ವಿಧೇಯಕವನ್ನು ಇಲ್ಲಿ ತಂದಾಗ ನಾನು ಹೇಳಿದ್ದನ್ನು ಮಾನ್ಯ ಕಂದಾಯ ಸಚಿವರು ಸ್ವಲ್ಪ ನೆನಪಿಗೆ ತಂದುಕೊಳ್ಳಬೇಕು ಆಗ ನಾನು ಇದರ ಒಂದು ದೃಷ್ಟಿಕೋನವನ್ನು ಬದಲಾವಣೆ ಮಾಡಿಕೊಳ್ಳಬೇಕು, ಮತ್ತು ನಿಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಳ್ಳಬೇಕು. ಎಂದು ಹೇಳಿದೆ ಧರ್ಮದ ಬಗ್ಗೆ ವಿರೋಧ ಮಾಡತಕ್ಕವರು ಇಲ್ಲ ಅನೇಕ ಧರ್ಮಗಳು ನಮ್ಮಲ್ಲಿ ಇವೆ ನಮ್ಮಲ್ಲಿ ವಿಗ್ರಹಪೂಜೆಯಲ್ಲಿ ನಂಬಿಕೆ ಇರುವವರೂ ಇದ್ದಾರೆ. ಈ ಸಂದರ್ಭದಲ್ಲಿ ಧರ್ಮಕ್ಕೆ, ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ಒಂದು ಕಾನೂನು ಮಾಡುವಾಗ ಸಮಾಜದ ಎಲ್ಲಾ ವರ್ಗಕ್ಕೆ ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳನ್ನೂ ಈ ಶಾಸನದ ವ್ಯಾಪ್ತಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು ಎಲ್ಲಾ ದೇವಸ್ಥಾನಗಳಲ್ಲೂ ಹರಿಜನ ಅರ್ಚಕರನ್ನು ನೇಮಕ ಮಾಡಿಲ್ಲ. ಇವೊತ್ತು ಕೇರಳದಲ್ಲಿ ಹರಿಜನ ಅರ್ಚಕರನ್ನು ದೇವಸ್ಥಾನದಲ್ಲಿ ನೇಮಕ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ತಾತನಕಾಲದಿಂದಲೂ ನಮ್ಮೂರಿನಲ್ಲಿ ಮಾರಮ್ಮನ ದೇವಸ್ಥಾನದಲ್ಲಿ ಹರಿಜನರೂ ಪೂಜೆ ಮಾಡುತ್ತಿದ್ದಾರೆ.

ಶ್ರೀ ಕಾಗೋಡುತಿಮ್ಮಪ್ಪ.—ಶಾರದಮ್ಮನ ಪೂಜೆ ಮಾಡಲಿಲ್ಲವಲ್ಲ ಮಾರಮ್ಮನ ಪೂಜೆಯನ್ನು ಮಾತ್ರ ಮಾಡುತ್ತಿದ್ದಾರೆ ನಿಮ್ಮ ಊರಿನಲ್ಲಿ ಅವರಿಂದ ಪೂಜೆ ಮಾಡಬಹುದು. ಮಾರಮ್ಮ ಶೂದ್ರದೇವತೆ ಎಂದು ವ್ಯಾಖ್ಯಾನ ಇದೆ ಆದ್ದರಿಂದ ಹರಿಜನರು ಕೆಲವರು ಮಾರಮ್ಮನನ್ನು ಪೂಜೆ ಮಾಡುತ್ತಾರೆ ಆದರೆ ಸಂಪೂರ್ಣವಾಗಿ ಒಂದಿನಿಂದ ನಡೆದು ಬಂದಂತಹ ಸಂಪ್ರದಾಯಗಳು ಏನಿವೆ ಇವುಗಳನ್ನು ತಿರಿಯಬೇಕು. ನಮ್ಮ ದೃಷ್ಟಿಕೋನ ಬದಲಾವಣೆ ಆಗಬೇಕಾದ್ದು ಅವಶ್ಯಕ.

ಶ್ರೀ ಟಿ ಆರ್. ಶಾಮಣ್ಣ —ನಮ್ಮ ಮನೆಯ ಹತ್ತಿರ ಒಂದು ಮಾರಮ್ಮ ಗುಡಿ ಇದೆ. ಪ್ರತಿ ಶುಕ್ರವಾರ ಎಲ್ಲಾ ಜಾತಿಯವರೂ ಸಹ ಅಲ್ಲಿಗೆ ಹೋಗುತ್ತಾರೆ. ನಾನೂ ಕೂಡ ಆ ಮಾರಮ್ಮನ ಗುಡಿಗೆ ಹೋಗಿದ್ದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ದೃಷ್ಟಿಕೋನ ಮೂಲಭೂತವಾಗಿ ಪರಿವರ್ತನೆ ಆಗಬೇಕು. ನಮ್ಮಲ್ಲಿ ಒಂದು ಕೆಳದಿ ದೇವಸ್ಥಾನವಿದೆ ಅಲ್ಲಿಗೆ ಅನೇಕ ಜಾತಿಯವರು ಬುದಿದ್ದಾರೆ. ಆಗಮ ಶಾಸ್ತ್ರವನ್ನು ಓದಿ ಯಾರಿಗೆ ಪೂಜೆ ಮಾಡಬೇಕು ? ಆಗಮ ಶಾಸ್ತ್ರವನ್ನು ನಾನೂ ಓದುತ್ತೇನೆ, ಪೂಜೆ ಮಾಡುವುದಕ್ಕೆ ಅಧಿಕಾರ ಕೊಡಬೇಕೆಂದು ಕೆಲವರು ಕೇಳಬಹುದು

ಶ್ರೀ ಎಚ್. ಡಿ. ದೇವೇಗೌಡ.—ಪೂಜೆ ಮಾಡುವುದಕ್ಕೆ ಗಿರಾಕಿಗಳು ಸಿಗುವುದಿಲ್ಲ ನೀವೂ ನೀವೂ ಎಲ್ಲಾ ಬದಲಾವಣೆಯಾಗಿದ್ದೇವೆಯೆಂದು ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು

ಶ್ರೀ ಕಾಗೋಡು ತಿಮ್ಮಪ್ಪ.—ಅದು ನಿಜ ಇರಬಹುದು

ಶ್ರೀ ಎಚ್. ಡಿ. ದೇವೇಗೌಡ.—ಆದರೆ ಅರ್ಚಕರಿಗೆ ಗಿಟ್ಟುವುದು ತೆಂಗಿನಕಾಯಿ

ಶ್ರೀ ಕಾಗೋಡು ತಿಮ್ಮಪ್ಪ ಕೊನೆಗೆ ಇದನ್ನು ಸಹ ಹೋಟಲಿಗೆ ಕೊಟ್ಟು ದುಡ್ಡು ಕೂಡಿಸುತ್ತಾರೆ. ಆದ್ದರಿಂದ ಯಾರೂ ಆ ಕೆಲಸಮಾಡುವುದಕ್ಕೆ ಗಿರಾಕಿಗಳು ಸಿಗುವುದಿಲ್ಲ ? ಈ ರೀತಿಯಾಗಿರುವುದರಿಂದ ದೃಷ್ಟಿಕೋನ ಅಲ್ಲಿಯೂ ಬದಲಾವಣೆಯಾಗಬೇಕು. ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನೊಳಗೊಂಡಂಥ ವ್ಯವಸ್ಥೆಕೂಡ ಆಗಬೇಕು ಒಟ್ಟಿನಲ್ಲಿ ಇವತ್ತು ಜಾತಿ ಪಂಥಗಳ ಆಧಾರದ ಮೇಲೆ ಈ ಸಮಾಜ ಬೆಳೆದು ನಿಂತಿದೆ ಅದರ ಆಧಾರದ ಮೇಲೆ ಮೋಸ ಆಗುತ್ತಿದೆ. ಇವತ್ತು ಶಾಸನ ಮಾಡಿ ಅದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಮಾಡುವಾಗ ಯಾರು ಯಾವ ಸಮಾಜಕ್ಕೇ ಒಳಗಾಗಿರಲಿ ದೇವಸ್ಥಾನಗಳಲ್ಲಿ ಮಾತ್ರ ಎಲ್ಲರೂ ಒಂದೇ ಸಮಾನವಾದ ವ್ಯವಸ್ಥೆಗೆ ಒಳಪಟ್ಟಿರಬೇಕೆಂಬ ಶಾಸನವನ್ನು ಮಾಡಬೇಕು ಮಹಮ್ಮದೀಯರು, ಕ್ರಿಶ್ಚಿಯನ್ನರು, ನಾಳೆಯ ದಿನ ವೀರಶೈವರೂ ಹಾಗೂ ಜೈನರೂ ಅದನ್ನು ಬೇಡವೆಂದು ಹೇಳಬಹುದು ಅವರ ಬಗ್ಗೆ ಎಲ್ಲ ಜಾತಿಯವರಿಂದಲೂ ಮನವಿಗಳೂ ಸಹ ಬರಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸಮಾಜದಲ್ಲಿ ಎಲ್ಲಾ ಭಕ್ತಾಧಿಗಳೂ ಇದ್ದಾರೆ. ಅವರಲ್ಲಿ ಹರಿಜನರೂ ಇದ್ದಾರೆ. ಅವರೇ ನೇರವಾಗಿ ಅರ್ಚನೆಯನ್ನೂ ಮಾಡುತ್ತಾರೆ. ನಮ್ಮಲ್ಲಿರತಕ್ಕ ಚುಂಚನಗಿರಿ ದೇವರು ಕಾಸ್ಮಾಪಾಲಿಟನ್.

ಶ್ರೀ ಬಾಪೂಗೌಡ.—ಹಿಂದೂ ಧರ್ಮದಲ್ಲಿ ಬೇರೆಬೇರೆ ಜಾತಿಗಳೂ ಇವೆ. ಅವರು ಹೋಗತಕ್ಕ ದೇವಾಲಯಂಗಳು, ಅಲ್ಲಿ ಅನುಸರಿಸತಕ್ಕ ಧರ್ಮಗಳಿಗೆ ಅನುಸಾರವಾಗಿ ಜನರು ಹೋಗತಕ್ಕದ್ದನ್ನು ನೋಡಿದರೆ, ಅದೇ ರೀತಿಯಾಗಿ ಬೇರೆಬೇರೆ ಧರ್ಮಗಳನ್ನೂ ಅಳವಡಿಸುವ ಒಂದು ಬಿಲ್ಲನ್ನು ತಂದರೆ ಸ್ವಾಗತಾರ್ಹ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಬಾಪುಗೌಡರ ಮನಸ್ಸಿನ ಇಂಗಿತವನ್ನು ಅರಿತು ಕೊಂಡೇ ನಾನು ಆ ರೀತಿಯಾಗಿ ಹೇಳಿದ್ದು. ಕ್ರೈಸ್ತರಾಗಲೀ ಮಹಮದೀಯರಾಗಲೀ ಇನ್ನೂ ಇತರೇ ಜಾತಿಯವರು ಯಾರೇ ಆಗಲೀ ಅವರು ಯಾವುದಾದರೂ ಕಾರಣದಿಂದ ಶಾಸನಕ್ಕೆ ವಿರೋಧವಾಗಿ ವರ್ತಿಸುವುದಕ್ಕೆ ಪ್ರಯತ್ನ ಪಟ್ಟರೆ ಅದು ಸರಿಯಾಗಿ ಕಾಣುವುದಿಲ್ಲ ಅಂತಹವರು ಅವರ ನಾದವನ್ನು ಮುಂದೊಡ್ಡಿ ಈ ಶಾಸನದಿಂದ ಹೊರಗೆ ಇರಬಹುದು ಯಾರನ್ನೋ ಹೊಂದಿಸಿಕೊಳ್ಳುವುದಕ್ಕೆ ಇನ್ನಾರಿಗೋ ತೊಂದರೆ ಕೊಡುವುದು ಬೇಡ ಇಡೀ ರಾಷ್ಟ್ರದಲ್ಲಿ ಈ ಜಾತೀಯ ವಾದಿಗಳು ಮೊದಲು ಹೋಗಬೇಕು ದೇವಸ್ಥಾನಗಳಲ್ಲಿ ಇಂಪರ ಬೇದಭಾವಗಳು ಇರಬಾರದು.

ಶ್ರೀ ಎಚ್. ಡಿ. ದೇವೇಗೌಡ.—ದೇವರುಗಳಿಗೂ ಪಾಲಿಟಿಕ್ಸ್ ಎಂದರೇನು ? ಪೊಲಿಟಿಕಲ್ ದೇವರು ಯಾರು ?

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ರಾಜಕೀಯ ಅನಾವಶ್ಯಕ. ಅದನ್ನು ಮುಂದೆ ನೋಡೋಣ. ಇವತ್ತು ಎಲ್ಲಾ ಧರ್ಮದ ಹೆಸರಿನಲ್ಲಿಯೇ ಇವೆಲ್ಲಾ ಬೆಳೆದಿರತಕ್ಕ ಸಂಸ್ಥೆಗಳು. ಆವು ಧರ್ಮಕ್ಷೇತ್ರಕ್ಕೆ ಮಿತಿಯಾಗಿದ್ದಿದ್ದರೆ ಇಷ್ಟು ಪ್ರಸ್ತಾಪವನ್ನು ಮಾಡಬೇಕಾಗಿರಲಿಲ್ಲ ಆದರೂ ಧರ್ಮದ ಹೆಸರಿನಲ್ಲಿ ಹಿಡಿತವೂ ಬೇಕು. ಧರ್ಮದ ಕ್ಷೇತ್ರಗಳಿಂದ ರಾಜಕೀಯ ಕ್ಷೇತ್ರಕ್ಕೆ ಹೋಗುವಾಗ ಅಲ್ಲಿ ಅದರ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಬೇಕು ಅವರ ಮನೋಭಾವದ ವಾತಾವರಣ ಹಾಗಿಯಾಗಬೇಕೆಂದು ನನ ಸದಭಿಪ್ರಾಯವಷ್ಟೆ. ಅದು ಅವರವರ ಕ್ಷೇತ್ರಗಳಿಗೆ ಸೀಮಿತವಾಗಿರಬೇಕು ಅವುಗಳ ವ್ಯವಸ್ಥೆಯೂ ಚೆನ್ನಾಗಿರಬೇಕು. ಎಲ್ಲಾ ವರ್ಗದ ಧರ್ಮದ ಕ್ಷೇತ್ರಗಳಲ್ಲಿ ಅನ್ಯಾಯವಾಗದೇ ಇರುವಂತೆ ಮಾಡಬೇಕು ಈ ದೃಷ್ಟಿಯಿಂದ ಸರ್ಕಾರದ ಮನೋಭಿಪ್ರಾಯ ಬದಲಾವಣೆಮಾಡಕೂಡದು. ದೇವಸ್ಥಾನಕ್ಕೆ ಸಂಬಂಧಪಟ್ಟ ಮೂಡೆಯನ್ನು ತಂದಾಗ ...

ಶ್ರೀ ಎಚ್. ಡಿ. ದೇವೇಗೌಡ.—ಇದರಿಂದ ಅವರ ಸ್ಥಾನಕ್ಕೆ ಧಕ್ಕೆ ತೆಗೆದುಕೊಂಡು ಬಂದಂತಾಗಿದೆ. ಆ ಒಂದು ಸ್ಥಾನಕ್ಕೆ ಏನು ಭದ್ರತೆಯನ್ನು ಮಾಡಬೇಕೋ ಅದನ್ನು ಮಾಡಬೇಕು. ಅಲ್ಲಿ ಮೂರು ಸ್ಥಾನಗಳಿದ್ದರೂ ಆ ಮೂರು ಸ್ಥಾನಗಳನ್ನು ಬದಲಾವಣೆಮಾಡುವಾಗ, ಆ ಸ್ಥಾನಗಳು ಇದ್ದರೂ ಇರಬಹುದು, ಹೋದರೂ ಹೋಗಲಿ, ವ್ಯವಸಾಯದ ಬಗ್ಗೆ ಹೆಚ್ಚಿನ ಆಸಕ್ತಿ ಇರುವಾಗ ಸ್ಥಾನದ ಬಗ್ಗೆ ಏನೂ ಇಲ್ಲ. ಇದರಲ್ಲಿ ಯಾರು ಇರುತ್ತಾರೆ, ಯಾರು ಹೋಗುತ್ತಾರೆಂಬುದು ಅಪ್ರಸ್ತುತ. ಈ ಸ್ಥಾನಕ್ಕೆ ನೀವು ಹೆಚ್ಚಿನ ಗಮನಕೊಡಬೇಕಾಗಿಲ್ಲ. ನಾವು ಒಂದು ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ವಿಚಾರಮಾಡುವ ಕಾಲದಲ್ಲಿ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಕೊಡಬೇಕು. ಮಾನ್ಯ ಸರ್ಕಾರದವರು ಇದರ ಬಗ್ಗೆ ಯಾವುದೇ ಮನವಿಗಳು ಬಂದರೆ ಬೆಲೆ ಕೊಡದೆ ಎಲ್ಲ ಧರ್ಮಗಳಿಗೂ ಸಂಬಂಧಪಟ್ಟಂತೆ ಪ್ರತಿಯೊಂದು ಸಂಸ್ಥೆಯನ್ನೂ ಈ ಕಾನೂನಿನ ವ್ಯಾಪ್ತಿಯೊಳಗೆ ತರಬೇಕು ಸರ್ವ ಧರ್ಮವಾಗಿದೆ.

ಇದು ಸರ್ವಧರ್ಮ ಸಮ್ಮೇಳನ, ಧರ್ಮಚಕ್ರ ಈ ರಾಷ್ಟ್ರದ ನಾಲ್ಕು ಭಾಗಗಳಿಂದಲೂ ಪ್ರವೇಶಮಾಡುತ್ತಿದೆಯೆಂದು ನಾನು ಒಂದು ಸಭೆಯಲ್ಲಿ ಹೀದೆ ಎಲ್ಲಿಯೋ ಭಾಗವಹಿಸಿದ್ದಾಗ ಹೇಳಿದೆ. ಆ ಒಂದು ಧರ್ಮಚಕ್ರದಲ್ಲಿ ಹೇಳಿರತಕ್ಕಂಥ ತತ್ವಗಳು ಮಾನವ ಧರ್ಮಕ್ಕೆ ಸಂಬಂಧ ಪಟ್ಟದ್ದು. ಅದನ್ನು ಒಬ್ಬರೇ ಮಾಡುವುದಕ್ಕಾಗುವುದಿಲ್ಲ ಎಲ್ಲರೂ ಸೇರಿ ಮಾಡಬೇಕು. ಈ ಧರ್ಮಚಕ್ರದಂತೆ ಈ ಕರ್ನಾಟಕದಲ್ಲಿ ನಡೆಯುವಾಗ ನಾವು ಎಲ್ಲ ಧರ್ಮಗಳಿಗೂ ಅನ್ವಯವಾಗುವಂತಹ ಒಂದು ಶಾಸನ ಪ್ರತಿಯೊಬ್ಬರಿಗೂ ವ್ಯಾಪಕವಾಗುವ ರೀತಿಯಲ್ಲಿ ಮಾಡೋಣವೆಂದು ನಾನು ಹೇಳುತ್ತೇನೆ: ಇನ್ನೊಂದು ವಿಷಯ ಈಗ ಒಂದು ನಮಗೆ ಕಾಂಪ್ರಹೆನ್ಸಿವ್ ಧರ್ಮಬೇಕು. ಅದು ಮಾನವ ಧರ್ಮಕ್ಕೆ ಸಹಾಯವಾಗುವಂಥ ಮಸೂದೆಯಂತೆ ಆಗಬೇಕು. ಇವತ್ತೂ ನೋಡುತ್ತಿದ್ದೇವೆ. ಧರ್ಮದ ಹೆಸರಿನಲ್ಲಿಯೇ ವ್ಯಾಪಾರಿ ಮಾನೋಭಾವ ಅನೇಕಕಡೆಗಳಲ್ಲಿ ನಡೆಯುತ್ತಿವೆ ಕೆಲವರಿಗೆ ಮಾರಮ್ಮ, ಶಾರದಮ್ಮ ಸತ್ಯನಾರಾಯಣ ಎಂದು ಹೇಳಿ ಅವರ ಒಂದು ಧರ್ಮವನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಅದು ಅನೂಜಾನವಾಗಿ ಅದರಲ್ಲಿ ಭೇದವಿಲ್ಲದೆ ಬಂದಿರುತ್ತಾರೆ. ಇಂಥಾದ್ದು ಅನೇಕ ಜನರಿಗೆ ಹಿಡಿಯುತ್ತದೆ. ಅದಕ್ಕಾಗಿ ಶಾಸನಗಳೂ ಸಹ ಇರಬೇಕಾದುದು ಸಹಜ. ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವಾಗ ಸ್ವಲ್ಪಮಟ್ಟಿಗೆ ಲೆಕ್ಕಾಚಾರ ಇಟ್ಟುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಶ್ರೀ ಬಸವಲಿಂಗಪ್ಪನವರು ಇದನ್ನು ನ್ಯಾಷನಲೈಜ್ ಮಾಡಿಸಿ ಎಂಬುದಾಗಿ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪನವರು.—ಅದಕ್ಕೇ ಅವರು ಹೊರಗೆ ಹೋದರು ವಾಪಾರ ಮನೋಭಾವನೆಯನ್ನು ಇಟ್ಟುಕೊಂಡು ಕೆಲವು ಸಂಸ್ಥೆಗಳು ಕೆಲವು ದೇವಸ್ಥಾನಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶಕೊಡಬಾರದು. ಅಂತಹ ಸಂಸ್ಥೆಗಳೂ ಮತ್ತು ವ್ಯಕ್ತಿಗಳು ನಮ್ಮ ಕರ್ನಾಟಕದಲ್ಲಿ ವಿಶೇಷವಾಗಿ ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಕೇಳಿದ್ದಕ್ಕೆ ನಾನು ಉತ್ತರ ಕೊಡದಿದ್ದರೆ ಹೇಗೆ ?

ಶ್ರೀ ಕಾಗೋಡುತಿಮ್ಮಪ್ಪ.—ಶ್ರೀಮಾನ್ ಬಸವಲಿಂಗಪ್ಪನವರು ದೇವರ ಪಟಗಳನ್ನು ಬಿಸಾಡಿ ಎಂದು ಹೇಳಿದ ಕೂಡಲೇ .....

SRI B BASAVALINGAPPA.—Let me not be mis quot d. Let us not mistake. ಚಿತ್ರ ಪಟಗಳನ್ನು ದೇವರು ಎಂದು ತಿಳಿದುಕೊಂಡು ನಾನ್ನು ಹೇಳಲಿಲ್ಲ.

MR DEPUTY SPEAKER.—The hon member Should be k nd and never be cruel to Him.

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕಿಂತ ಮುಂಚೆ ಒಬ್ಬ ಸದಸ್ಯರು ಹೇಳಿದರು, ಧನ್ಯಾಸ್ಥಳದಲ್ಲಿರುವ ಭೂತಪ್ಪ ಹಿಡಿದುಕೊಳ್ಳತ್ತದೆಂದು ಅದುದರಿಂದ ತಾವು ಅವರ ಪೈಮೇಲೆ ಬೀಳುವುದಕ್ಕೆ ಹೋಗಬೇಡಿ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲ, ೧೪ ದೇವಸ್ಥಾನಗಳನ್ನು ವಹಿಸಿಕೊಳ್ಳುತ್ತೇವೆಂದು ಅವರು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ.—ವಹಿಸಿಕೊಂಡಿಲ್ಲ ಅಷ್ಟು ಹೊತ್ತಿಗೆ ಅವರೇ ಹೊರಟು ಹೋಗಿಬಿಟ್ಟರು. ಮಾನ್ಯ ಅಧ್ಯಕ್ಷರೇ ಇದನ್ನು ಒಂದು ವ್ಯಾಪಾರಿ ಮನೋವೃತ್ತಿಯಾಗಿಟ್ಟುಕೊಂಡು ಕೆಲವರು ಸಂಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರಿಂದ ಅನೇಕ ಅವ್ಯವಹಾರಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಧರ್ಮದ ಹೆಸರಿನಲ್ಲಿ ವ್ಯಾಪಾರ ನಡೆಯಬಾರದು ಮತ್ತು ಜನರಲ್ಲಿರತಕ್ಕಂಥ ಮಾನಸಿಕ ದುರ್ಬಲತೆಗಳನ್ನು ಉಪಯೋಗಿಸಿಕೊಂಡು, ಏನು ಜನ ದೇವರಲ್ಲಿ ನಂಬಿಕೆಯನ್ನಿಟ್ಟುಕೊಂಡಿದ್ದಾರೆ ಮತ್ತು ಅವರು ಕೊಡತಕ್ಕಂಥ ಕಾಣಿಕೆಗಳು, ಹಣ ಇನಿವೆ ಅದು ದುರ್ವಿನಿಯೋಗವಾಗಬಾರದು. ಜನರಲ್ಲಿರತಕ್ಕಂಥ ಮಾನಸಿಕ ಸ್ಥಿತಿಯೇ ಒಂದು ಶೋಷಣೆಗೆ ಅವಕಾಶವಾಗಬಾರದು, ಆ ರೀತಿ ವ್ಯಾಪಾರಿ ಮನೋವೃತ್ತಿಯನ್ನಿಟ್ಟುಕೊಂಡು ಶೋಷಣೆ ನಡೆಸುತ್ತಿದ್ದಾರೆ ಆ ಶೋಷಣೆಯನ್ನು ತಪ್ಪಿಸುವುದಕ್ಕೆ ಈ ಕಾನೂನಿನಿಂದ ಸಹಾಯಕವಾಗಬೇಕು ಆ ಒಂದು ದೃಷ್ಟಿಕೋನ ಈ ಕಾನೂನಿನಲ್ಲಿರಬೇಕು ಆದುದರಿಂದ ನಾನು ಈ ಕಾನೂನಿನಲ್ಲಿ ಹುಡುಕಿದೆ ಎಲ್ಲಿಯಾದರೂ ಸಿಕ್ಕುತ್ತದೆಯೇನೋ ಎಂದು ಆದರೆ ಇವತ್ತು ಅದು ಇಲ್ಲ ನಾನೂ ಧರ್ಮಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಧ್ಯಕ್ಷರೇ ಇವತ್ತಿಗೂ ಅಲ್ಲಿ ಊಟಕ್ಕೆ ಬೇರೆ ಬೇರೆ ಪಂಕ್ತಿಯೇ ಇದೆ. ಈಗ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ. ಸಾರ್ವಜನಿಕರಿಗೆ ಸೇರಿರತಕ್ಕಂಥ ಹಣ ದುರ್ವಿನಿಯೋಗವಾಗಿ ಹೇಳುವವರೇ ಇಲ್ಲದ ಹಾಗಾಗಿದೆ. ಕೇಳುವವರೆ ಇಲ್ಲದಾಗಿದೆ ಇವತ್ತು ಕೆಲವು ಜನ ಅಲ್ಲಿಗೆ ಹೋಗುತ್ತಾರೆ ಮತ್ತೆ ಕೆಲವರು ಇಲ್ಲಿಂದಲೇ ಮನಿ-ಆರ್ಡರ್ ಮಾಡುತ್ತಾರೆ ಮತ್ತೆ ಕೆಲವರು ಮನೆಯಲಿಯೇ ನ್ಯಾ

ಮಂಗನಿಗೆ ಕಾಯಿಲೆ ಬರದಿರಲಿ ಹಾಗಾಗದಿರಲಿ, ಹೀಗಾಗದಿರಲಿ ಎಂದೂ ಕಾಣಿಕೆಯನ್ನಿಟ್ಟಿರುತ್ತಾರೆ. ೮ ಆಣೆ ೧ ರೂಪಾಯಿ ಮುಂಡಿಪುಗಟ್ಟು ಅದನ್ನು ಕಳುಹಿಸಿಕೊಡುತ್ತಾರೆ. ಜನ ಏತಕ್ಕೆ ಆ ರೀತಿ ಕಳುಹಿಸಿ ಕೊಡುತ್ತಾರೆ ? ಅಲ್ಲಿ ಮ್ಯಾನೇಜ್‌ಮೆಂಟಿನವರು ಇದ್ದಾರೆ ಎಂದು ಕಳುಹಿಸುವುದಿಲ್ಲ ಅಲ್ಲಿ ವ ಂಜುನಾಥ ಸ್ವಾಮಿ ಇದ್ದಾನೆಂದು ಕಳುಹಿಸುತ್ತಾರೆ. ಆದರೆ ಆ ಹಣ ಆ ರೀತಿಯಾಗಿ ಸರಿಯಾಗಿ ಸೇರುವುದಿಲ್ಲ. ಆ ಹಣ ಸರಿಯಾಗಿ ಸಾರ್ವಜನಿಕರ ಕಲ್ಯಾಣಕೋಶ್ಕರ ಖರ್ಚಾಗದೆ, ಯಾರ ಯಾರ ಜೇಬಿಗೋ ಹೋಗುತ್ತಿದೆ. ಆದುದರಿಂದ ಆ ಹಣ ಸರಿಯಾಗಿ ಸಾರ್ವಜನಿಕರಿಗೆ ಉಪಯೋಗವಾಗುವ ರೀತಿ ಯಲ್ಲಿ ಏನಾದರೂ ವ್ಯವಸ್ಥೆ ತರಬೇಕೆಂದರೆ ಈ ಶಾಸನದಲ್ಲಿ ಅವಕಾಶವಿಲ್ಲ. ಮಾನ್ಯ ಕೃಷ್ಣಪ್ಪನವರು ಹೇಳಿದ ಹಾಗೆ, ಶನಿದೇವರಹೆಸರಿನಲ್ಲಿಯೂ ಎಷ್ಟೋ ಕಡೆಗಳಲ್ಲಿ ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಈ ಶನಿದೇವರ ಹೆಸರಿನಲ್ಲಿಯೂ ಸಹ ಅನೇಕ ಕಡೆಗಳಲ್ಲಿ ದೊಡ್ಡ ದೊಡ್ಡ ಅವಾಂತರ ನಡೆಯುತ್ತಿದೆ ಶನಿದೇವರ ಹೆಸರನ್ನು ಹೇಳಿದರೆ ಸಾಕು ಮೈಯೆಲ್ಲಾ ಬೆವರು ಬರುವುದಕ್ಕೆ ಶುರುವಾಗುತ್ತದೆ. ಇವತ್ತಿನ ದಿವಸ ಶನಿದೇವರ ಹೆಸರಿನಲ್ಲಿಯೂ ಶೋಷಣೆ ನಡೆಯುತ್ತಿದೆ ಅದಕ್ಕೆ ನಾನು ಆಗಲೇ ಹೇಳಿದೆ ಮನುಷ್ಯನ ದುರ್ಬಲತೆಯೇ ಇದಕ್ಕೆ ಕಾರಣ ಎಂದು ಆದುದರಿಂದ ಇವತ್ತು ಅನೇಕ ದೇವರುಗಳ ಹೆಸರಿನಲ್ಲಿ ಅನೇಕ ಶೋಷಣೆಗಳು ನಡೆಯುತ್ತಿವೆ, ಸಾರ್ವಜನಿಕರು ಕೊಡತಕ್ಕಂಥ ಹಣ ಯಾರೋ ಒಬ್ಬ ಪೂಜಾರಿಯೋ, ಯಾರೋ ಒಬ್ಬ ಆನಾಮಧೇಯರ ಹೆಸರಿನಲ್ಲಿ ಖರ್ಚಾಗುತ್ತಿರುವುದನ್ನು ತಪ್ಪಿಸುವುದಕ್ಕೆ ನಿಯಂತ್ರಣ ಹಾಕತಕ್ಕಂಥ ಸಂದರ್ಭಗಳೂ ಕೂಡ ಇದೆ ಇಂಥದ್ದೇ ಒಂದು ಸಂದರ್ಭಬಂದಾಗ ಭೂ ಶಾಸನವನ್ನು ತಂದಿದ್ದೇವೆ. ಇವತ್ತು ಯಾವುದೇ ಸಂಸ್ಥೆಗಳು ಭೂಮಿಯನ್ನು ಎರಡು ಹಿಡುವಳಿಗಳಿಗಿಂತ ಜಾಸ್ತಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ ಆದರೆ ಇವತ್ತು ಅನೇಕ ಕಡೆಗಳಲ್ಲಿ ಕೇಳಿದ್ದೇನೆ ಅವರು ಏನು ಮಾಡಿದ್ದಾರೆಂದರೆ ಅದು ಮಠಕ್ಕೆ ಸೇರಿದ್ದು, ಸಂಸ್ಥೆಗಳಿಗೆ ಸೇರಿದ್ದು ಎಂದು ಹೇಳುತ್ತಿದ್ದಂಥವರು ಇವತ್ತು, ಅದು ವ್ಯಕ್ತಿಗೆ ಸೇರಿದ್ದು ಎಂದು ಹೇಳುವಂಥ ಮಾತುಗಳು ಕೇಳಿ ಬರುತ್ತಿವೆ. ನಮ್ಮ ಕ್ಷೇತ್ರದಲ್ಲಿಯೇ ಇಂಥದ್ದು ನಡೆದಿದೆ. ಇವತ್ತು ಮಂಠಗಳು, ಸಂಸ್ಥೆಗಳು ಏನ್ನು ಆಸ್ತಿಯನ್ನು ಇಟ್ಟುಕೊಂಡಿದ್ದಾರೆ, ಏನು ಸಾರ್ವಜನಿಕರಿಂದ ಸಂಪತ್ತನ್ನು ಮಾಡಿಕೊಳ್ಳುತ್ತಿದ್ದಾರೆ ಅದು ಸಹ ಸಮಾಜಕ್ಕೆ ಸರಿಯಾಗಿ ವಿನಿಯೋಗವಾಗಬೇಕು ಆ ರೀತಿ ಮಾಡಲು ನಿಮ್ಮ ಕಾನೂನಿನಲ್ಲಿ ಅಧಿಕಾರವನ್ನು ಹೊಂದಿರಬೇಕು. ನಿಮ್ಮ ಕಾನೂನಿನಲ್ಲಿ ಅದನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಏನೇನು ನ್ಯೂನ್ಯತೆಗಳು ಇವೆಂದು ನಾವು ಮೊದಲೇ ಹೇಳಿದ್ದೇವೆ, ಈ ಅವ್ಯವಹಾರದ ರೀತಿಯಲ್ಲಿ ನಡೆದು ಕೊಳ್ಳುವುದೇ ಆಗಲೀ ಮತ್ತೊಂದೇ ಆಗಲೀ ಅವುಗಳನ್ನು ಸಮಗ್ರವಾದಂಥ ರೀತಿಯಲ್ಲಿ, ಒಂದು ನೀತಿಯಲ್ಲಿ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಕೋನದಿಂದ ಈ ಶಾಸನದಲ್ಲಿ ಹಲವಾರು ತಿದ್ದುಪಡಿಗಳು ಮಾಡಬೇಕಾದ್ದು ಅಗತ್ಯವಿದೆ ತಾವು ಈ ಅರ್ದಂಭರ್ದ ಮನಸ್ಸಿನಿಂದ ಕೆಲಸವನ್ನು ಮಾಡುವುದಕ್ಕೆ ಹೋಗದೆ ನೇರವಾಗಿ ಮಾಡಬೇಕು. ಆದುದರಿಂದ ಇವತ್ತು ಧರ್ಮದ ಹೆಸರಿನಲ್ಲಿ ಏನು ಅನ್ಯಾಯ ನಡೆಯುತ್ತಿದೆ ಅದನ್ನು ತೊಡದುಹಾಕಿ ಅದು ಎಲ್ಲರಿಗೂ ಸೇರಿದ ಸ್ವತ್ತು ಎಲ್ಲರ ವರ್ಗಕ್ಕೂ ಸೇರಿದ ಸ್ವತ್ತು ಎನ್ನುವ ರೀತಿಯಲ್ಲಿ ಒಂದು ಹೊಸ ಕಾನೂನನ್ನು ಸೃಷ್ಟಿ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಮಾನ್ಯ ಅಧ್ಯಕ್ಷರೇ ನಮ್ಮ ಕಂದಾಯ ಸಚಿವರು ತಂದಿರತಕ್ಕಂಥ ವಿಧೇಯಕವೇನಿದೆ ಅದು ಜಂಟಿ ಪರಿಶೀಲನಾ ಸಮಿತಿಗೆ ಹೋಗುವುದರಿಂದ ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಬಯಸುವುದಿಲ್ಲ. ಏನು ನ್ಯೂನ್ಯತೆಗಳು ಇವೆ ಏನ್ನುವ ಬಗ್ಗೆ ಮಾತ್ರ ಳ ಮಾತುಗಳನ್ನು ಹೇಳುತ್ತೇನೆ ಮಾನ್ಯ ಸಚಿವರು ಇದನ್ನು ಇಂಟರ್‌ಡ್ಯೂಸ್ ಮಾಡುವಾಗ ಳ ಮಾತುಗಳನ್ನು ಹೇಳಿದ್ದು ಕಳೆದ ಸಿ—ಳ ಸಾರಿ ಇದನ್ನು, ಇಲ್ಲಿ ಮಂಡಿಸಲ್ಪಟ್ಟು ಕೊನೆಗೂ ಲ್ಯಾಪ್ಸ್ ಆಯಿತ್ತು, ಕೊನೆಗೆ ಮಾನ್ಯ ಹುಚ್ಚೆಮಾಸ್ತಿಗೌಡರವರು ಇದನ್ನು ಮಂಡಿಸಿದ್ದು ಈವಾಗಲೂ ಸಹ ಲ್ಯಾಪ್ಸ್ ಆದೀತೇನೋ ಎನ್ನುವ ಶಂಕೆ ವ್ಯಕ್ತಪಡಿಸಿದರು. ಇದನ್ನು ಮಂಡಿಸಿದಂಥ ಪೂರ್ವಜರಿಗೆ ಆದ ಹಾಗೆ ಈವಾಗಲೂ ಅಲ್ಲಿಗೆ ಕೈಬಿಟ್ಟು ಹೋಗುತ್ತದೆಯೋ ಲ್ಯಾಪ್ಸ್ ಆಗುತ್ತದೆಯೋ ಎನ್ನುವುದನ್ನು ವ್ಯಕ್ತಪಡಿಸಿದರು ಅದರೆ ಅದು ಆಗದ ಹಾಗೆ ಕೆಲಸ ಮಾಡುತ್ತಾರೆ ಎನುವಂಥ ವಿಶ್ವಾಸವನ್ನಿಟ್ಟುಕೊಂಡಿದ್ದೇನೆ. ಸ್ವಾಮಿ, ಈ ಧರ್ಮದ ಬಗ್ಗೆ ವ್ಯಾಖ್ಯಾನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಧರ್ಮದ ಹೆಸರಿನಲ್ಲಿ ನಮ್ಮ ರಾಷ್ಟ್ರದಲ್ಲಿ ಏನೆಲ್ಲಾ ಅನಾಹುತಗಳು ಆಗಿದ್ದರೂ ಅದರ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡಬೇಕಾಗಿದೆ. ನಮ್ಮ ಕವಿಗಳು ಹೇಳಿದ್ದಾರೆ.

''ಧೆರ್ಮದ ತೆರೆಯ ಮರೆಯಲ್ಲಿ ನಡೆಯುತ್ತಿರುವ ನರನ ಹಿಂಸೆ ಸಾಕಂ ಮನುಜನ ಹೃದಯದಲ್ಲಿರುವ ಅನ್ಯಾಯದ ರಾಕ್ಷಸನನ್ನು ಗೆದ್ದು ಬದುಕಬೇಕು''

ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತು ಧರ್ಮದ ಹೆಸರಿನಲ್ಲಿ, ಅನ್ಯಾಯದ ರಾಕ್ಷಸ ಎದ್ದು ನಿಂತಿದ್ದಾನೆ. ಅವನನ್ನು ಗೆಲ್ಲಬೇಕಾದರೆ ಸಾಮಾಜಿಕ ವಾದಂಥ ಮೂಲಭೂತವಾದ ಪರಿವರ್ತನೆ, ಬದಲಾವಣೆ ಆಗುವುದರ ಬಗ್ಗೆ ಈ ದಿಶೆಯಲ್ಲಿ ಒಂದು ಹೆಜ್ಜೆಯನ್ನಿಡಬೇಕು. ಆ ದೃಷ್ಟಿಯಿಂದ ಈಗ ನಮ್ಮ ಸಮಾಜದಲ್ಲಿರತಕ್ಕಂಥ ಈ ಧರ್ಮದ ಹೆಸರಿನಲ್ಲಿ, ಕರ್ಮದ ಹೆಸರಿನಲ್ಲಿ, ಇತ್ಯಾದಿ ಹೆಸರುಗಳಲ್ಲಿ ಏನು ಒಡವರ ಮತ್ತು ಅಜ್ಞಾನಿಗಳ, ಅಥವಾ ಅವಿದ್ಯಾವಂತರ ಶೋಷಣೆ ನಡೆಯುತ್ತಿದೆ ಆ ಶೋಷಣೆಗೆ ಒಂದು ಸರಿಯಾದಂಥ ಮುಕ್ತಾಯವನ್ನು ಮಾಡಿ, ನವ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಇದು ಸಹಾಯಕ ವಾಗಬೇಕು. ನಮ್ಮ ಸಂವಿಧಾನದ ಪ್ರಕಾರ ಆ ರೀತಿ ಕೈಹಾಕುವುದಕ್ಕೆ ಇದರಲ್ಲಿ ಅವಕಾಶ ವಿಲ್ಲವೆಂದು ಕಾಣುತ್ತಿದೆ. ನಮ್ಮ ರಾಜ್ಯಕ್ಕೆ ಇರತಕ್ಕಂಥ ಅಧಿಕಾರದಿಂದ ನಾವು ಕೈ ಹಾಕುವುದಕ್ಕೆ ಅವಕಾಶವಿದೆಯೇ ಎನ್ನುವ ಬಗ್ಗೆ ವಿಚಾರ ಮಾಡಬೇಕು ಏತಕ್ಕೆಂದರೆ ನಮ್ಮ ರಾಷ್ಟ್ರ ಚ್ಯುತ್ಯಾತೀತ ರಾಷ್ಟ್ರ ಸೆಕ್ಯೂಲರ್ ಸ್ಟೇಟ್ ಅಂಥ ಹೇಳುತ್ತೇವೆ. ಆ ರೀತಿ ಹೇಳುವುದರಿಂದ, ಮಾರಿಯಮ್ಮ, ಭೂ ತಮ್ಮ ಶಾರದಮ್ಮ ತಿರುಪತಿ ತಿಮ್ಮಪ್ಪ. ಮಂಜುನಾಥ ಏಳು ಯಾವ ಯಾವ ಹೆಸರಿನಲ್ಲಿ ಬೇಕಾದರೂ ಪೂಜೆ ಮಾಡಿ ಕೊಂಡು ಹೋಗುತ್ತಾರೆ ಆ ರೀತಿ ಮಾಡಿಕೊಂಡು ಹೋಗುವುದಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ.

12-30 P. M.

ಇವತ್ತು ತಾವು ತಂದಿರತಕ್ಕಂಥ ಅನೇಕ ಹಳೆಯ ಕಾನೂನುಗಳನ್ನು ಬದಲಾಯಿಸಿ ಹೊಸ ಕಾನೂನು ಗಳನ್ನು ಮಾಡುವುದಕ್ಕೆ ಪ್ರಯತ್ನಗಳು ಏನು ಮಾಡಿದ್ದೀರಿ ಅದು ನಾವು ಏನು ಹಿಂದೂಗಳು ಅಂತ ಅನಿಸಿ ಕೊಂಡಿದ್ದೇವೆ ನಾವು ಹೀಗೆಯೇ ಹಿಂದಿನಿಂದಲೂ ಎರಡು ಕಾನೂನಿನ ಗೊಂದಲಕ್ಕೆ ಸಿಕ್ಕಿಕೊಂಡಿದ್ದೇವೆ. ಅದು ಯಾವುದು ಎಂದರೆ ಒಂದು ಭಾರತ ಸಂವಿಧಾನ ಮತ್ತೊಂದು ಮನು ಧರ್ಮ. ಈ ಎರಡು ಧರ್ಮ ಗಳ ಕೆಳಗಡೆ ನಾವು ಕಟ್ಟುಬಿಟ್ಟಾಗಿ ಬದುಕಬೇಕಾಗಿದೆ. ಯಾವತ್ತು ಒಂದು ಕಡೆ ಮನುಧರ್ಮ ಇನ್ನೊಂದು ಕಡೆ ಭಾರತ ಸಂವಿಧಾನ ಎಂದು ಹೇಳಿದರೆ ಈ ಸಭೆಯುಗದ ಬಗ್ಗೆ ಮತ್ತು ಇನ್ನಿತರ ಬಗ್ಗೆ ಏನು ಮಾಡಿದ್ದೀರಿ ಅದನ್ನು ಕೇಳಂವಷ್ಟು ಕಾಯಿದೆಯನ್ನು ಹಾಕಿದರೆ ಅದರ ಜೊತೆಯಲ್ಲಿ ರಾಷ್ಟ್ರದಲ್ಲಿ ಇತರ ಜನಾಂಗಗಳು ಅಂದರೆ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಜನಾಂಗದ ಬಗ್ಗೆ ಎಲ್ಲಾ ಒಟ್ಟುಗೂಡಿಸಿ ಒಂದು ಸಮಗ್ರವಾದ ಕಾಯಿದೆಯನ್ನು ತಂದರೆ ಹೆಚ್ಚು ಪ್ರಯೋಜನವಾಗುತ್ತದೆ. ಯಾರೋ ಪಾಪಿ ಒಬ್ಬ ಸಿಕ್ಕುತ್ತಾನೆ ಎಂದು ಅವರ ಮೇಲೆ ಮತ್ತು ಅವರ ತಲೆಯಮೇಲೆ ಎಲ್ಲಾ ಭಾರವನ್ನು ಹಾಕುತ್ತೀರಿ? ಅಲ್ಲದೆ ಬೇರೆ ಇನ್ಸ್‌ಟ್ರೂಷನ್ ಬಗ್ಗೆ ಆಂದರೆ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಮತದ ಬಗೆ ತಾವು ಮಾತನಾಡಲು ತಮಗೆ ಧೈರ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಇವರು ರಾಷ್ಟ್ರದ ಪ್ರಜೆಗಳಲ್ಲವೇ? ಇವರ ಮೇಲೆ ಯಾವ ಕಾನೂನು ತರುವುದಕ್ಕೆ ತಯಾರಿಲ್ಲ. ಆದ್ದರಿಂದ ನಾನು ಹೇಳುವುದು ಭಾರತದಲ್ಲಿ ಎಲ್ಲರೂ ಸರಿಸಮಾನರು ಎನ್ನುವ ದೃಷ್ಟಿಯಿಂದ ನೋಡುವುದಾದರೆ ಇದಕ್ಕೆ ಒಂದು ಸಮಗ್ರವಾದ ಕಾಯಿದೆಯನ್ನು ಎಲ್ಲಾ ಜನಾಂಗ ಮತ್ತು ಜನಾಂಗದ ಧರ್ಮದಮೇಲೂ ಕಾಯಿದೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅದನ್ನು ಮಾಡಬೇಕೇ ಹೊರತು ಕೇವಲ ಕೆಲವರನ್ನು ಹಿಡಿಯುವುದು ಮತ್ತೆ ಕೆಲವರನ್ನು ಬಿಡುವುದು ನಾವು ಒಪ್ಪತಕ್ಕದ್ದಲ್ಲ. ಇದರಲ್ಲಿ ಸರ್ಕಾರ ತಾರತಮ್ಯ ಮಾಡುವುದು ಏನು ಇದೆ? ಇನ್ನು ಹೋದವರ್ಷದಲ್ಲಿ ತಂದಂಥ ಸೊಂಡೂರು ದೇವಸ್ಥಾನದ ಬಗ್ಗೆ ಏನಾಯಿತು? ಆ ಪಿಧೇಯಕವನ್ನು ಇಷ್ಟರೊಳಗೆ ಕಾನೂನು ಮಾಡಬಹುದಾಗಿತ್ತು. ಅಲ್ಲಿ ಯಾರು ಗೇಣಿದಾರರು ಇದ್ದಾರೆ ಅವರ ೨-೩ ಸಾವಿರ ರೂಪಾಯಿ ಎರಿಗೆ ಕೊಡಬೇಕಾಗಿತ್ತು. ಇವತ್ತು ಅದನ್ನು ಪಾಸ್ ಮಾಡಿದ್ದರೆ ನೂರಕ್ಕೆ ನೂರು ಜನ ಗೇಣಿದಾರರಿಗೆ ಆ ಸೌಲತ್ತು ದೊರೆಯುತ್ತಿತ್ತು ಆ ದೃಷ್ಟಿಯಿಂದ ಕೆಲವೊಂದು ಜನರನ್ನು ಮತ್ತು ಜನಾಂಗವನ್ನು ಬಿಡುವುದು ಮಾಡುವುದು ಏನು ಒಂದು ಗೊಂದಲ ಇದೆ ಆ ಗೊಂದಲದಲ್ಲಿ ನೀವು ಮುಳುಗಿದ್ದೀರಿ? ಈ ಎಲ್ಲಾ ಗೊಂದಲ ಗಳಿಂದ ಕಂದಾಯಮಂತ್ರಿಗಳು ಗೊಂದಲೇಶ್ವರರಾಗಿದ್ದಾರೆ ಆದ್ದರಿಂದ ದಯಮಾಡಿ ಇದರಿಂದ ದೂರ ಸರಿದು ಖಚಿತವಾಗಿ ಒಂದು ನಿಲುವನ್ನು ತಳೆದು ಸಮಗ್ರವಾಗಿ ಕಾಯಿದೆಯನ್ನು ತರಬೇಕೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇನ್ನೊಂದು ವಿಷಯ ಕೆಲವು ಸಂಸ್ಥೆಗಳು ಟ್ರಸ್ಟ್ ಎಂದು ಮಾಡಿಕೊಂಡು ಇದರ ಒಂದು ಸೌಲಭ್ಯವನ್ನು ಹೊಂದುತ್ತಿದ್ದಾರೆ. ಅದಕ್ಕೆ ನಮ್ಮ ಸರ್ಕಾರದವರು ಕೈಹಾಕುವುದಿಲ್ಲ. ಅದನ್ನು ಮಾನ್ಯ ಕಂದಾಯಸಚಿವರು ಹೇಳಿದ್ದಾರೆ ನಾವು ಅದರ ಒಳಗೆ ಕೈಹಾಕುವುದಕ್ಕೆ ಹೋಗುವುದಿಲ್ಲವೆಂದು. ಒಳಗೆ ಕೈಹಾಕುವುದಿರಲಿ ಆ ಕಡೆ ತಿರುಗಿ ನೋಡಲು ಕೂಡ ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಶೃಂಗೇರಿ ಮಠ. ಅದಕ್ಕೆ ಮಾನ್ಯ ಕಂದಾಯ ಸಚಿವರು ಆಗಾಗ್ಗೆ ಬರುತ್ತಾ ಇರುತ್ತಾರೆ. ಆ ಮಠದವರು ತಮ್ಮನ್ನು ಬಹಳ ಗೌರವದಿಂದ ಮತ್ತು ಆದರದಿಂದ ನೋಡುತ್ತಾರೆ ಕಂದಾಯ ಸಚಿವರು ಆ ಮಠಕ್ಕೆ ಗುರು ಭಕ್ತ ತಿಲಕರು, ಏತಕ್ಕೆ ಅಲ್ಲಿಗೆ ಬರುತ್ತಾರೆ ಎಂದು ನಮಗೆ ಬಹಳ ಆಶ್ಚರ್ಯವಾಗುತ್ತದೆ. ಅದೇ ನಮ್ಮ ಊರಿಗೆ ಬನ್ನಿ ಎಂದರೆ ಬರುವುದಿಲ್ಲ ತಾವು ಏನು ಕಾಯಿದೆಯನ್ನು ತರುವುದಕ್ಕೆ ಹೊರಟಿದ್ದೀರಿ ಅವರಲ್ಲಿ ಒಂದು ಸಮಗ್ರವಾದ ಬದಲಾವಣೆಯನ್ನು ಮಾಡಲು ಒಂದು

ಹೆಜ್ಜೆಯನ್ನು ಇಡಬೇಕು, ಅಂತಹ ಒಂದು ಕಾಯಿದೆಯನ್ನು ತರುವುದಕ್ಕೆ ಪ್ರಯತ್ನಮಾಡಬೇಕು, ಆದರಿಂದ ಎಲ್ಲಾ ಮತಧರ್ಮಗಳಿಗೂ ಸಮಾನ ಸ್ಥಾ ಮಾನ ಗೌರವ ದೊರಕಬೇಕು. ಅದು ಇಲ್ಲದೆ ಬಾ ಅರ್ಥಂಬರ್ದ ಶಾಸನ ತರುವುದರ ಬದಲು ಸುಮ್ಮನೆ ಇರುವುದು ಒಳ್ಳೆಯದು ಎಂದು ಹೇಳುತ್ತೇನೆ. ಹಿಂದೆ ಈಗಾಗಲೇ ಮೂರು ಸಾರಿ ಲ್ಯಾಪ್ಸ್ ಆಗಿದೆ ಆದ್ದರಿಂದ ಈ ಅಧಿವೇಶನ ಮುಗಿಯುವುದರೊಳಗೆ ಇದನ್ನು ಮಾಡದೆ ಇದ್ದರೆ ತೊಂದರೆ ಆಗುತ್ತದೆ. ಇದರಿಂದ ತಾವು ಹಿಂದೆ ಹೋಗುವ ಸಂಭವ ಇದೆ. ಹಿಂದೆ ಒಂದು ಸಾರಿ ಪೂಜ್ಯ ಶ್ರೀ ಕಡಿದಾಳ್ ಮಂಜಪ್ಪನವರು ಇದ್ದಾಗಲೂ ಇದೇ ರೀತಿ ತೊಂದರೆಗಳು ಬಂದವು. ತಾವು ಧೈರ್ಯವ ಡಿ ಇದನ್ನು ಕಾರ್ಯಗತ ಮಾಡುತ್ತೀರೆಂದು ನನಗೆ ನಂಬಿಕೆ ಇಲ್ಲ. ವಾರಕ್ಕೆ ಮೂರು ಸಾರಿ ಶೃಂಗೇರಿಗೆ ಬಂದು ಹೋಗುವುದು ಆಗಿಹೋಗಿದೆ ಅಷ್ಟೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ತಮಗೆ ಅದರ ಬಗ್ಗೆ ಏತಕ್ಕೆ ಇಷ್ಟು ಕೋಪ ಎಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಏತಕ್ಕೆಂದರೆ ನಾವು ಅಲ್ಲೇ ಹುಟ್ಟಿ ಬೆಳೆದು ಬಂದವರು ೧೯೫೦ನೇ ಇಸವಿಯಿಂದ ಕಾಗೋಡು ಬಗ್ಗೆ ಹೋರಾಟ ಮಾಡಿದ್ದೇವೆ! ಮಾನ್ಯ ಬದರಿಯವರಿಗೆ ಇದಂ ಗೊತ್ತಿದೆ. ಆದ್ದರಿಂದ ಜನರ ಮನೋಭಾವ ಏನು ಇದೆ? ಎಂಬುದಂ ನಮಗೆ ಗೊತ್ತು.

ಶ್ರೀ ಕೋಣಂದೂರು ಲಿಂಗಪ್ಪ.— ಇನ್ನು ದೇವಸ್ಥಾನಗಳನ್ನು ಸೃಷ್ಟಿಮಾಡಿದ್ದು ಚಾಲುಕ್ಯ ಚಂದ್ರ ಗುಪ್ತ ಮೌರ್ಯರ ಕಾಲದಲ್ಲಿ ಅವರು ಪರೋಕ್ಷವಾಗಿ ಜನಗಳಿಂದ ತೆರಿಗೆಯನ್ನು ವಸೂಲಿ ಮಾಡುವ ಕ್ರಮದಿಂದ ದೇವಸ್ಥಾನಗಳನ್ನು ನಿರ್ಮಾಣ ಮಾಡಿದರು ಎಂದರೆ ತಪ್ಪಾಗಲಿಕ್ಕಿಲ್ಲ. ಆಗ ಇದನ್ನು ಮಾಡಿದರು, ಈಗ ನಮ್ಮ ನವ ಚಾಲುಕ್ಯರು ಆದನ್ನೇ ಮುಂದುವರೆಸಿಕೊಂಡು ಬರುತ್ತಾ ಇದ್ದಾರೆ ತೆರಿಗೆ ವಸೂಲಿ ಮಾಡುವುದನ್ನೇ ಪರೋಕ್ಷವಾಗಿ ದೊಡ್ಡದುಮಾಡಿ ದೇವರ ಹೆಸರಿನಲ್ಲಿ ಹುಚ್ಚಮಾಸ್ತಿಗೌಡರು ಒಂದು ಕತೆ ಕಟ್ಟಿದರಂ

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಿಮ್ಮ ಹೆಸರನ್ನು ಬದಲಾಯಿಸಿದರೆ ಒಳ್ಳೆಯದು.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಹಾಗೆ ನಮ್ಮ ತಂದೆತಾಯಿಗಳು ನನಗೆ ಒಂದು ಹೆಸರನ್ನು ಇಟ್ಟಿದ್ದಾರೆ ಆದರೆ ಹೆಸರನ್ನು ಇಡುವುದು ತಪ್ಪು ಎಂದು ಹೇಳುತ್ತಿಲ್ಲ ಆದರೆ ಆ ಹೆಸರನ್ನು ಹೊಂದಿಸಿಕೊಂಡು ದೇವರ ಹೆಸರು ಹೇಳಿ ಪರೋಕ್ಷವಾಗಿ ಆದರ ಬೆನ್ನು ಒಡಿದುಕೊಂಡು ಹೋಗುವುದು ತಪ್ಪು ಎಂದು ಹೇಳುತ್ತೇನೆ ದೇವರ ಹೆಸರಿನಲ್ಲಿ ಈ ಜನ ಬೊಜ್ಜು ಬೆಳೆಸಿಕೊಂಡು ಹೋಗುತ್ತಿದ್ದಾರೆ? ದೇವರ ವಿಷಯದಲ್ಲಿ ಮೂಲಭೂತವಾಗಿ ಬದಲಾವಣೆ ಮಾಡುವುದು ಅವಶ್ಯಕವೆಂದು ಹೇಳುತ್ತಿಲ್ಲ. ಈ ರಾಷ್ಟ್ರದ ಜನರನ್ನು ಆದರಲ್ಲೂ ಹಳ್ಳಿಯ ಜನರನ್ನು ಮತ್ತು ಅವಿದ್ಯಾವಂತರನ್ನು ಸಾವಿರಾರು ವರ್ಷಗಳಿಂದ ಶೋಷಣೆ ಮಾಡಿಕೊಂಡು ಯಾರು ಬರುತ್ತಿದ್ದಾರೆ ಅವರು ಆ ಶೋಷಣೆಯನ್ನು ನಿಲ್ಲಿಸುವ ಉದ್ದೇಶದಿಂದ ಕಾನೂನು ಮಾಡಬೇಕೆಂದು ನಾನು ಕೇಳುತ್ತೇನೆ. ಸುಮ್ಮನೆ ಕಾನೂನನ್ನು ತರುವುದು. ಮಠಗಳಿಂದ ಎಷ್ಟು ಅದಾಯ ಬರುತ್ತದೆ ಎನ್ನುವುದನ್ನು ನೋಡಿ ಹಿಸ್ಸೆ ಮಾಡಿಕೊಳ್ಳುವುದು ಇವೆಲ್ಲ ಬೇಡ. ನಾವು ಈ ವಿಷಯವನ್ನು ಮೂಲಭೂತವಾಗಿ ವಿಚಾರಮಾಡಬೇಕು. ಇಂಥ ವಿಚಾರಗಳನ್ನು ಸರಿಯಾದ ರೀತಿಯಲ್ಲಿ ವಿಚಾರಮಾಡಿ ಅದಕ್ಕೆ ಪೂರಕವಾದ ರೀತಿಯಲ್ಲಿ ವಿಧೇಯಕವನ್ನು ತರಬೇಕು ಎಂದು ನನ್ನ ಅಪೇಕ್ಷೆ. ಕಲ್ಲು ದೇವರಲ್ಲ, ಮಣ್ಣು ದೇವರಲ್ಲ ಎಂದು ಬಸವಣ್ಣನವರು ಹೇಳಿದ್ದಾರೆ. ನಮ್ಮಲ್ಲಿ ವಿಚಾರಕ್ರಾಂತಿ ಆಗಬೇಕು ಎನ್ನುವುದರ ಬಗ್ಗೆ ನಾವು ನೋಡಬೇಕು. ಇದಕ್ಕೆ ಪೂರಕವಾಗಿ ನಾವು ವಿಚಾರ ಮಾಡಬೇಕು. ಈಗ ತಾವು ತಂದಿರತಕ್ಕ ವಿಧೇಯಕದಲ್ಲಿ ಶೋಷಣೆ ಮಾಡತಕ್ಕ ಕೇಂದ್ರಗಳು ಏನು ಇವೆ ಇವುಗಳ ಮೇಲೆ ಸರಿಯಾದಂಥ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ತಮಗೆ ಶಕ್ತಿಯಿದೆಯೇ. ಅಂಥ ಕೆಲಸವನ್ನು ತಾವು ಮಾಡುತ್ತೀರಾ ಅಥವಾ ಇವನ್ನು ಲ್ಯಾಪ್ಸ್ ಮಾಡುತ್ತೀರಾ? ನಮ್ಮ ಈ ಅಧಿವೇಶನವು ಇದೇ ತಿಂಗಳ ೧೬ನೇ ತಾರೀಖು ಮತ್ತೆ ಸೇರುವುದಿದೆ. ಆ ಅಧಿವೇಶನದಲ್ಲಿ ಸೊಂಡೂರು ಇನಾಂ ಅಬಾಲಿಷನ್ ಆಕ್ಟ್ ಏನು ಇದೆ ಅದನ್ನು ತಂದು ಪಾಸ್ ಮಾಡಿಕೊಂಡು, ನಂತರ ಪರಿಷತ್ತಿನಲ್ಲಿ ತೆಗೆದುಕೊಂಡು ಹೋಗಿ ಪಾಸ್ ಮಾಡಿಸಿಕೊಂಡು ತಕ್ಷಣ ಕಾಯಿದೆ ಮಾಡತಕ್ಕಂಥ ಕೆಲಸ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಮಸೂದಾ ಕಾನೂನಿನ ವ್ಯಾಪ್ತಿಯನ್ನು ಬಿಟ್ಟು ಶ್ರೀಮಾನ್ ಲಿಂಗಪ್ಪನವರು ಮೂಲಭೂತವಾದ ಧರ್ಮ ಬದಲಾವಣೆಯ ವಿಷಯವಾಗಿ ಬಹಳ ದೊಡ್ಡ ಭಾಷಣವನ್ನು ಮಾಡಿದ್ದಾರೆ. ಇದು ನಮ್ಮ ಮುಂದಿರತಕ್ಕ ಪ್ರಶ್ನೆಯಲ್ಲ. ಧಾರ್ಮಿಕ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅವಶ್ಯಕವಾದಂಥ ಕಾನೂನನ್ನು ರಚನೆ ಮಾಡತಕ್ಕದ್ದು ನಮ್ಮ ಮುಂದೆ ಇರತಕ್ಕ ವಿಷಯ. ಈ ಸಂಸ್ಥೆಗಳನ್ನು ರಿಜಿಸ್ಟರ್ ಮಾಡಿಕೊಳ್ಳುವು

ದಾಗಲೀ, ಇವುಗಳಿಗೆ ಬರತಕ್ಕ ಹಣ ದುರುಪಯೋಗವಾಗದೆ ಇರುವ ರೀತಿಯಲ್ಲಿ ಇವುಗಳನ್ನು ಅಭಿವೃದ್ಧಿ ಮಾಡತಕ್ಕ ವಿಷಯದಲ್ಲಿ, ಮತ್ತೆ ಇವುಗಳನ್ನು ಯಾವರೀತಿ ನಡೆಸಿಕೊಂಡು ಹೋಗಬೇಕು ಎನ್ನುವ ವಿಷಯದಲ್ಲಿ ನಮಗೆ ಸಹಾಯವಾಗುವ ರೀತಿಯಲ್ಲಿ ಒಂದು ಕಾನೂನು ಬೇಕು. ಇವುಗಳ ಬಗ್ಗೆ ಒಂದು ಏಕರೂಪದ ಕಾನೂನು ಅವಶ್ಯವಾಗಿದ್ದರಿಂದ ಅದರ ಕಡೆ ನಾವು ಲಕ್ಷ್ಯ ಕೊಟ್ಟು ಈ ಮಸೂದಾ ಕಾನೂನನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಹೇಳತಕ್ಕಂಥ ಮೂಲಭೂತವಾದ ಧರ್ಮ ಬದಲಾವಣೆಯ ವಿಷಯದಲ್ಲಿ ಸರ್ಕಾರ ಕಾನೂನು ಮಾಡತಕ್ಕದ್ದು ಅವಶ್ಯಕವಿಲ್ಲ. ಈ ಸಮಾಜ ಹುಟ್ಟಿ ಬೆಳೆದಂದಿನಿಂದ ಇದಕ್ಕೆ ಯಾವದೋ ಒಂದು ರೂಪ ಬಂದಿದೆ ಧರ್ಮದ ವಿಷಯದಲ್ಲಿ ಹೆಚ್ಚು ಮಾತನಾಡತಕ್ಕ ಸಾವ ರ್ಥ ನನಗೆ ಇಲ್ಲ. ಆದರೆ ಮೂಲಭೂತವಾಗಿ ಧರ್ಮದ ತಿರುಳಿನ ವಿಷಯದಲ್ಲಿ ಹೆಚ್ಚು ಭಿನ್ನಾಭಿಪ್ರಾಯ ಇರುವುದಕ್ಕೆ ಸಾಧ್ಯವಿಲ್ಲ. ಅನೇಕ ವೇಳೆ ಧರ್ಮದ ಮೂಲದಲ್ಲಿಯೇ ಕವಲುಗಳು ಒಡೆದು ಮೂಲಭೂತವಾದ ಧರ್ಮಕ್ಕೆ ತದ್ವಿರುದ್ಧವಾಗಿ ಹೋಗತಕ್ಕ ಸಂದರ್ಭ ಬಂದಿರತಕ್ಕದ್ದು ಇದೆ. ಇದರ ಮೇಲೆ ವ್ಯಾಖ್ಯಾನ ನಡೆದಿಯೇ ಹೊರತು ಧರ್ಮವನ್ನು ಮೂಲಭೂತವಾಗಿ ವ್ಯಾಖ್ಯಾನ ಮಾಡತಕ್ಕದ್ದನ್ನು ನಾನು ಕಾಣೆ ಮಾನ್ಯ ಸದಸ್ಯರು ಒಂದು ಮಹತ್ವವಾದಂಥ ವಿಷಯವನ್ನು ಬೇಳಿದ್ದಾರೆ. ಎಲ್ಲಾ ಧರ್ಮಗಳ ಸಂಸ್ಥೆಗಳಿಗೂ ಕೂಡ ಈ ಕಾನೂನು ವ್ಯಾಪ್ತಿ ಇರುವ ಹಾಗೆ ಮಾಡಬೇಕು. ಹಾಗಿದ್ದರೆ, ಈ ಬಿಲ್ಲಿನ ಹತೋಟಿಯಲ್ಲಿ ಎಲ್ಲಾ ಸಂಸೆಗಳು ಬರಂತ ವೆ ಎಂದು ಹೇಳಿದರು. ತಮ್ಮ ಉದ್ದೇಶವೇನೋ ನಿಜ. ಆದರೆ ಅಖಿಲ ಭಾರತ ಮಟ್ಟದಲ್ಲಿ ಮುಸ್ಲಿಂ ಸಂಸ್ಥೆಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೋಸ್ಕರ ವಾಕ್ಫ್ ಆಕ್ಟ್ ಎಂದು ಒಂದು ಕಾನೂನು ಇರುತ್ತದೆ. ಈ ಕಾನೂನನ್ನು ತರತಕ್ಕ ಸಂದರ್ಭದಲ್ಲಿ ಉಳಿದ ಎಲ್ಲಾ ಧರ್ಮದ ಸಂಸ್ಥೆಗಳ ಮೇಲೆ ಹತೋಟಿ ಬರುತ್ತದೆಯೇ ಇಲ್ಲವೇ ಎನ್ನುವ ಹೆಚ್ಚಿನ ವಿವರಗಳಿಗೆ ನಾವು ಹೋಗುವುದು ಅನಾವಶ್ಯಕ ಮಾನ್ಯ ಸದಸ್ಯರಾದ ಶಾಮಣ್ಣನವರು ಚಿಕ್ಕಪೇಟೆಯಲ್ಲಿ ಜೈನರ ಒಂದು ದೊಡ್ಡ ಸಂಸ್ಥೆ, ಅದು ಲಕ್ಷಾಂತರ ರೂಪಾಯಿಗಳ ವ್ಯವಹಾರವನ್ನು ನಡೆಸತಕ್ಕ ಸಂಸ್ಥೆ. ಅದನ್ನು ಹತೋಟಿಗೆ ತೆಗೆದುಕೊಳ್ಳುವ ರೀತಿಯಲ್ಲಿ ಕಾನೂನು ಇರಬೇಕು ಎಂದು ಹೇಳಿದರು. ಈಗ ನಮ್ಮ ಕಾನೂನಿನ ವ್ಯಾಪ್ತಿ ಏನೆಂದರೆ ನಮ್ಮ ರಾಜ್ಯದಲ್ಲಿ ಕೆಲವು ಸಂಸ್ಥೆಗಳಿಗೆ ನಾವು ಇನಾಂಕೊಟ್ಟಿದ್ದೇವೆ, ಅಥವಾ ಹಣದ ರೂಪದಲ್ಲಿ ಸಹಾಯವನ್ನು ಮಾಡಿದ್ದೇವೆ, ಅಂಥ ಸಂಸ್ಥೆಗಳ ಮೇಲೆ ಸರ್ಕಾರದವರು ತಮ್ಮ ಹತೋಟಿಯನ್ನು ಇಟ್ಟುಕೊಳ್ಳುವುದು ಅವಶ್ಯಕ ಸಾರ್ವಜನಿಕರಿಂ ತೆಗೆದುಕೊಂಡಹಣದುರುಪಯೋಗವಾಗದಂತೆ ನೋಡುವುದಕ್ಕೆ ಸರ್ಕಾರದ ಅಧಿಕಾರವಿದೆ. ಇಂಥ ಸಂದರ್ಭದಲ್ಲಿ ನಾವು ಯಾವುದನ್ನು ನಮ್ಮ ಹತೋಟಿಗೆ ತೆಗೆದುಕೊಳ್ಳಬೇಕು ಎನ್ನುವುದನ್ನು ನೋಡುತ್ತೇವೆ. ಇದೇ ಶಾಸನ ಸಭೆಯಲ್ಲಿ ರೇಣುಕ ಎಲ್ಲಮ್ಮ ದೇವಸ್ಥಾನದ ಬಗ್ಗೆ ಒಂದು ಮಸೂದೆಯನ್ನು ಕೂಡ ನಾವು ತಂದಿದ್ದೇವೆ. ಈ ದೇವಸ್ಥಾನಗಳ ಆಡಳಿತ, ಇಂಥ ಸಂಸ್ಥೆಗಳ ಆಡಳಿತದ ಬಗ್ಗೆ ಪೂರ್ಣವಾಗಿ ಒಂದು ಏಕರೂಪವಾದ ಶಾಸನ ಆಗಬೇಕು ಎನ್ನುವುದು ನಮ್ಮ ಮುಂದೆ ಇರತಕ್ಕ ವಿಷಯ ನಾನು ಇನ್ನು ಬಹಳ ಹೆಚ್ಚಿನ ವಿಷಯಗಳಿಗೆ ಹೋಗದೆ, ಇದನ್ನು ವಿವರವಾಗಿ ಪರಿಶೀಲನೆ ಮಾಡಿ ಪೂರ್ಣ ಚಿತ್ರವನು ಸಭೆಯ ಮುಂದೆ ಇಡಬೇಕಾದರೆ ಇದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾದ್ದು ಅಗತ್ಯ. ಆದ್ದರಿಂದ ಈ ಮಸೂದೆಯನ್ನು ಜಂಟಿ ಪರಿಶೀಲನಾ ಸಮಿತಿಗೆ ಕಳುಹಿಸಬೇಕು ಎನ್ನುವುದು ನನ್ನ ಉದ್ದೇಶ ಇದೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಸ್ಥೂಲವಾದ ಒಪ್ಪಿಗೆಯನ್ನು ಕೊಡಬೇಕು ಎಂದು ಇದನ್ನು ಸಭೆಯ ಮುಂದೆ ಇಟ್ಟಿದ್ದೇನೆ ಸೊಂಡೂರಿನ ಮಸೂದೆಗೂ ಮತ್ತು ಈಗ ತಂದಿರತಕ್ಕ ಮಸೂದೆಗೂ ಏನೂ ಸಂಬಂಧ ಇಲ್ಲ ಅದಕ್ಕೆ ಕಾನೂನನ್ನು ನಾವು ಆಗಲೇ ಮಾಡಿದ್ದೇವೆ, ಅದೂ ಸಹ ಪರಿಶೀಲನಾ ಸಮಿತಿಯ ಮುಂದೆ ಇದೆ. ಅದರಿಂದ ವರದಿ ಬರುವುದು ಇದೆ. ಆದಷ್ಟು ಬೇಗ ಅದನ್ನೂ ಸಭೆಯ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ, ತಮ್ಮ ಅಪ್ಪಣೆ ಪಡೆದು ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.— The question is.

"That the Karnataka Religious and Charitable Institution and Trust Bill, 1974, be taken into consideration."

The motion was adopted

Motion to Refer to a J. S. C.

SRI N. HUCHAMASTHY GOWDA (Minister for Revenue).— I beg to move;

" That the Karnataka Religious and Charitable Institution Trust Bill 1974, be referred to a Joint Select Committee consisting of a total number of 20 members (15 members from the Assembly and 5 members from the Council) and that the concurrence of the Legislative Council be obtained thereof and the following members of this House shall be the members of the Joint Select Committee *viz.*—

Sriyuts.—

1. K. Subramanya Gowda
2. K. R. S. Nayudu
3. J. S. Ammannavar
4. Smt. C. Nagamma Keshava Murthy
5. Smt. Addy Saldhana
6. A. M. Belliappa
7. P. M. Bangi
8. Manik Rao Ramachandra Rao Phulekar
9. Mallikarjuna Kharge
10. Andanaiah
11. Kagodu Thimmappa
12. T. R. Shamanna
13. J. L. Kabadi
14. N. S. Gurusiddappa
15. A. Nanjappa"

MR. DEPUTY SPEAKER.— The question is;

" That the Karnataka Religious and Charitable Institutions Trust Bill, 1974, be referred to a Joint Select Committee consisting of a total number of 20 members (15 members from the Assembly and 5 members from the Council) and that the concurrence of the Legislative Council be obtained thereof and the following members of this House shall be the members of the Joint Select Committee *viz.*—

Sriyuths.—

1. K. Subramanaya Gowda
2. K. R. S. Nayudu
3. J. S. Ammannavar
4. Smt. C. Nagamma Keshava Murthy
5. Smt. Addy Saladhana

6. A. M. Belliapppa
7. P. M. Bangi
8. Manik Rao Ramachandra Rao Phulekar
9. Mallikarjuna Kharge
10. Andanaiah
11. Kagodu Thimmappa
12. T. R. Shamanna
13. J. L. Kabadi
14. N. S. Gurusiddappa
15. A. Nanjappa"

SRI M. S. KRISHNAN.— Sir, at this stage I would request the Government that one member from the Communist Party may be included in the Joint Select Committee.

SRI N. HUCTHAMASTHY GOWDA.— So far as I am concerend, I depended upon the Opposition as a whole to give a list of five names. At this last minute it is rather difficult to include anyone. else

SRI M. S. KRISHNAN.— Last time an issne connected with this Bill was raised by the hon. Member Sri V. N. Patil who is a member of our party. There are certain matters which concern the place from which he comes. That is why we have suggested his name. I would be obliged if the Hon. Minister could consider his name and include it.

MR. DEPUTY SPEAKER.— These things should be decided earlier.

SRI M. S. KRISHNAN.— There has been no consultation with us I wish the Minister had consulted us in this mattter.

The motion was adopted

MR. DEPUTY SPEAKER.—The House now stands adjourned to meet at 1-00 P. M. on Wednesday, the 16th April 1975.

The House adjourned at fifty-five Minutes Past Twelve of the Clock to meet again at One of the Clock on Wednesday the 16th April 1975.

WD 2560—GPB—550—2-8-1975